ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ

CC-0. In Public Domain. Digitized by eGangotri

ಒಂದು ಕನಸಿನ ಮುನ್ನುಡಿ ಗುರುಚರಣಗಳಿಗೆ .....



ವಿ. ಆರ್. ಗೌರೀಶಂಕರ್

ನಿರೂಪಣೆ-ಸಂಯೋಜನೆ: ರಮೇಶ್ ಬೇಗಾರ್

ಪ್ರಕಾಶಕರು: Sri Vidyabharathi Book Centre, Sringeri

CC-O. In Public Domain. Digitized by eGangotri



With Best Compliments from

SHYAM GUNTUR

Andra Pradesh

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕನಸಿನ ಮಣ್ಣುಂಡಿ

ಗುರುಚರಣಗಳಿಗೆ...

ವಿ.ಆರ್. ಗೌರೀಶಂಕರ್

ನಿರೂಪಕ: ಸಂಯೋಜಕ : ಸಂಪಾದಕ
ರಮೇಶ್ ಬೇಗಾರ್

ಗೌರವ ಸಂಪಾದಕರು
ಎಂ.ಎಂ. ಪ್ರಭಾಕರ ಕಾರಂತ್

'ಅಭಿಮಾನ' ಬಳಗದ ಕೊಡುಗೆ
ಕಾಳಿಂಗ ನಾವಡ ಪ್ರತಿಷ್ಠಾನ
ಭಾರತೀ ಬೀದಿ, ಶೃಂಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕನಸಿನ ಮುನ್ನುಡಿ... ಗುರುಚರಣಗಳಿಗೆ

ಪ್ರಕಾಶಕರು

'ಅಭಿಮಾನ' ಬಳಗದ ಕೊಡುಗೆ

C/o ಕಾಳಿಂಗ ನಾವಡ ಪ್ರತಿಷ್ಠಾನ

ಭಾರತೀ ಬೀದಿ, ಶೃಂಗೇರಿ

ಪ್ರಥಮ ಮುದ್ರಣ: ಮೇ 2003

© ಹಕ್ಕುಗಳು: ಆಯಾ ಲೇಖಕರವು

ಬೆಲೆ: 25/-

ಮುದ್ರಣ:

ಸವಿ ಆಫ್‌ಸೆಟ್

ಹರಿಹರಬೀದಿ, ಶೃಂಗೇರಿ

ಅಕ್ಷರ ಜೋಡಣೆ ಮತ್ತು

ಪುಟವಿನ್ಯಾಸ :

ಶ್ರೀಕಾಂತ್ ಗ್ರಾಫಿಕ್, ಶೃಂಗೇರಿ

ಮುಖಪುಟ ವಿನ್ಯಾಸ:

ಶುಭ ಆರ್ಟ್ಸ್, ಬೆಂಗಳೂರು

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಪಣೆ



ಆಗಾಗ ಉತ್ಸವಾದಿಗಳ ನಡುವೆ ನಾನು ಕಣ್ಣಿಗೆ ಬಿದ್ದರೆ
ಅಲ್ಲಿಂದಲೇ ಆಶೀರ್ವಾದ ನಗುಬೀರುವ,
ನಮ್ಮ ಮಾಧ್ಯಮ ಸಂದರ್ಶನಕ್ಕೆ ಸದಾ ಸಹಕರಿಸುವ,
ನರಸಿಂಹವನದಲ್ಲಿ ದರ್ಶನಕ್ಕೆಂದು ಹೋದರೆ "ಏನು ರಮೇಶ" ಎಂದು
ಒಮ್ಮೊಮ್ಮೆ ಆತ್ಮೀಯವಾಗಿ ಹೆಸರಿಡಿದು ಕರೆವ,
ಮಗದೊಮ್ಮೆ ಮಾತಿಲ್ಲದೇ ಬರೀ ಮೌನದಲ್ಲೇ ದಿಟ್ಟಿಸಿ
ಆತ್ಮವಿಶ್ವಾಸದ ಚೈತನ್ಯ ನೀಡುವ,
ನನ್ನ ವೈಯಕ್ತಿಕ ಬದುಕಿನ ಹಲವು ಮಜಲುಗಳಲ್ಲಿ
ಪ್ರಭಾವ ಬೀರಿ ಸದಾ ಮುನ್ನಡೆಸುತ್ತಿರುವ
ನಮ್ಮ ಪರಮಪೂಜ್ಯ
ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಯವರಿಗೆ
ಈ ಕಿರುಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

-ರಮೇಶ್ ಬೇಗಾರ್.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರ ನುಡಿ

ಇದೊಂದು ವಿಭಿನ್ನ ಪ್ರಯತ್ನ. ವ್ಯಕ್ತಿಯೊಬ್ಬರ ಸಂದರ್ಶನವನ್ನು ಆಧರಿಸಿ, ನಿರೂಪಣೆಯೊಂದಿಗೆ ಜನರೆದುರು ಪುಸ್ತಕ ರೂಪದಲ್ಲಿ ಇಡುವ ಪ್ರಯತ್ನ. ಇದು ಒಂದು ಯಶಸ್ಸಿನ ಕಥೆಯನ್ನು ಭಾವನಾತ್ಮಕವಾಗಿ ಜನರೆದುರು ಬಿಚ್ಚಿಡಲಿದೆ.

ವಿ.ಆರ್. ಗೌರೀಶಂಕರ್ ಒಬ್ಬ ಸಮರ್ಥ ಆಡಳಿತಗಾರ ಮಾತ್ರವಲ್ಲ ಅತ್ಯುತ್ತಮ ಮಾತುಗಾರ ಕೂಡಾ. ಅವರ ಮಾತುಗಳೆಲ್ಲಾ ವಾಸ್ತವಕ್ಕೆ ನೇರ. ಗುರುಪ್ರೀತಿಯ ವಿಚಾರ ಬಂದಾಗ ಅತಿಭಾವುಕ. ಇವರ ಮಾತುಗಳನ್ನೆಲ್ಲಾ ಹೆಕ್ಕಿ ಅದನ್ನು ಅಕ್ಷರದಲ್ಲಿ ಪೋಣಿಸಿ ಇಡುವ ಪ್ರಯತ್ನವನ್ನು ಇಲ್ಲಿ ಬೇಗಾರ್ ಮಾಡಿದ್ದಾರೆ. ಇದೊಂದು ಪ್ರಮುಖ ಬರಹವಾಗಿದೆ. ಉಳಿದಂತೆ ವಿ.ಆರ್. ಗೌರೀಶಂಕರ್ ಬರೆದ ಆಂಗ್ಲ ಬರಹವಿದೆ. ಈ ಗುರುಭವನ ಕಟ್ಟಡವನ್ನು ವಿನ್ಯಾಸ ಮಾಡಿದ ಖ್ಯಾತ ಕಟ್ಟಡವಿನ್ಯಾಸತಜ್ಞ ಆರ್. ಸುಂದರಂ ಬರೆದ ಬರಹ ಈ ಪುಸ್ತಕದ ಮೆರುಗನ್ನು ಹೆಚ್ಚಿಸಿದೆ. ಗುರುಭವನ ನಿರ್ಮಾಣಗೊಳ್ಳುತ್ತಿರುವ ನರಸಿಂಹವನದ ಕುರಿತು ಸಂಪೂರ್ಣ ವಿಭಿನ್ನವಾದ ಬರಹವೊಂದನ್ನು ಟಿ.ವಿ. ಶಿವಕುಮಾರ್ ಬರೆದಿದ್ದಾರೆ. ಶೃಂಗೇರಿ ಸಂಸ್ಥಾನದ ಸಾಮಾಜಿಕ ಸೇವೆಗಳ ಹೊಸ ಯೋಜನೆಗಳ ಕುರಿತು ಎನ್.ಸಿ. ಪಾಂಡುರಂಗ ಬರೆದ ಬರಹವೊಂದಿದೆ. ಹೀಗೆ ಐತಿಹಾಸಿಕ ಗುರುಭವನದ ಉದ್ಘಾಟನೆ ಸಂದರ್ಭ ಇದೊಂದು ವಿಭಿನ್ನ ಪುಸ್ತಕವಾಗಿ, ಶ್ರೀಮಠದ ಭಕ್ತಾದಿಗಳಿಗೆ ಅಮೂಲ್ಯ ಕೊಡುಗೆಯಾಗಿದೆ.

ಪ್ರಕಾಶಕರ ಪರವಾಗಿ

ಎಂ.ಎಂ. ಪ್ರಭಾಕರ ಕಾರಂತ್

ಗೌರವ ಸಂಪಾದಕರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಯೋಜಕನ ಮಾತುಗಳು

ನನಗೆ ಹೊಗಳುಭಟನೆಂಬ ಆರೋಪವಿದೆ. ಯಾರೂ ಮಾಡದ ಕೆಲಸವನ್ನು ಮಾಡಿದ್ದೀಯ ಎಂಬ ಮೆಚ್ಚುಗೆಯೂ ಇದೆ. ಶೇಕಡಾವಾರು ಪ್ರಮಾಣ ಮೆಚ್ಚಿದವರು ಹೆಚ್ಚಾದರೆ ಚುಚ್ಚುನುಡಿದವರು ಸರಿಯಾಗಿ ಒಂದು ಕೈ ಬೆರಳಿನ ಎದುರೇ ಸಿಕ್ಕುವವರು.

ಅಭಿಮಾನವೆಂಬುದು ಸಂಪೂರ್ಣ ಅಂತಃಕರಣದ ವಿಷಯ. ಸಾರ್ವಜನಿಕ ಜೀವಿಯೊಬ್ಬನ ಕುರಿತಾದ ಅಭಿಮಾನ ಅದಾಗಿದ್ದರೆ ಅದನ್ನು ಸಾರ್ವತ್ರಿಕಗೊಳಿಸುವುದರಲ್ಲಿ ತಪ್ಪೇನಿದೆ? ನನಗೆ ಅಭಿಮಾನ ನಮ್ಮ ಜಗದ್ಗುರುಗಳ ಮೇಲೆ, ನಮ್ಮ ಶಾರದಾಪೀಠದ ಮೇಲೆ, ನಮ್ಮ ಆಡಳಿತಾಧಿಕಾರಿಗಳ ಮೇಲೆ. ಇಷ್ಟಾದ ಮೇಲೆ ನಾನೊಬ್ಬ ಕಲಾವಿದ, ಬರಹಗಾರ. ನನ್ನ ಅಭಿಮಾನವನ್ನು ಆ ಮಾಧ್ಯಮದಲ್ಲಿಯೇ ತಾನೆ ತೋರಿಸಬೇಕು. ಮತ್ತೆ ಏನನ್ನೂ ಮಾಡದೇ ಹೋದರೆ ಯಾರು ಏನನ್ನೂ ಹೇಳುವುದಿಲ್ಲ. ಮಾಡುವುದೇ ಹೌದಾದರೆ ಹೇಳುವವರ ಎಲ್ಲಾ ಮಾತುಗಳನ್ನು ಕೇಳಲು ಸಿದ್ಧವಾಗೇ ಇರಬೇಕು.

ನಾನು ಜಗದ್ಗುರುಗಳವರ ಪ್ರಾಣದಯೆಯ ಕುರಿತು ಅವರ ಆಪ್ತಸಹಾಯಕ ಕೃಷ್ಣಮೂರ್ತಿಯವರ ಸಂದರ್ಶನವನ್ನು ಆಧರಿಸಿ ಒಂದು ಬರಹ ಬರೆದಾಗ ಅದನ್ನು ಮೆಚ್ಚಿ ಮಾತನಾಡಿದವರು ಅದೆಷ್ಟು ಜನ. 'ಸಮರ್ಥ ಸಾರಥಿ' ಪುಸ್ತಕಕ್ಕೆ ನಾಡಿನಾದ್ಯಂತ ಜನರ ಮೆಚ್ಚುಗೆ ಬಂದಿವೆ. ಹಾಗೇ ಶ್ರೀಮಠದ ಶಂಕರಾಚಾರ್ಯ ನಾಟಕ ಮಾಡಿದಾಗ, ಶ್ರೀ ಚಂದ್ರಶೇಖರ ಭಾರತಿಗಳ ಜೀವನ ಚರಿತ್ರೆಯನ್ನು ನಾಟಕ ಮಾಧ್ಯಮಕ್ಕೆ ಇಳಿಸಿದಾಗ, ಶೃಂಗೇರಿ ಕ್ಷೇತ್ರ ಮಹಾತ್ಮೆ ಯಕ್ಷಗಾನ ಮಾಡಿಸಿದಾಗ ಸ್ವತಃ ಸ್ವಾಮೀಜಿಯವರೇ "ನೀವುಗಳು ಏನೇ ಮಾಡಿದರೂ ಸಂಸ್ಥಾನದ ಮೇಲಿನ ಪ್ರೀತಿಯಿಂದ ಮಾಡ್ತೀರಪ್ಪಾ. ನಮ್ಮ ಆಶೀರ್ವಾದವಿದೆ" ಎಂದು

CC-O. In Public Domain. Digitized by eGangotri

ಮನದುಂಬಿ ಮೆಚ್ಚಿ ನುಡಿದಿದ್ದರು. ನನ್ನ ಈ ಅಭಿಮಾನಕ್ಕೆ ಆಶೀರ್ವಾದದ ಕವಚವನ್ನು ಸ್ವಾಮೀಜಿ ನನಗೆ ಆತ್ಮವಿಶ್ವಾಸವನ್ನು ತುಂಬಿಸುವುದರ ಮೂಲಕ ಗುರುಕೃಪೆಯ ಕರುಣೆ ತೋರಿದರು. ಈಗ ಈ ಬರಹದಲ್ಲಿ ನಮ್ಮ ಗುರುಗಳೊಂದಿಗೆ ಅತ್ಯಂತ ಹೆಚ್ಚಿನ ನಿಕಟ ಸಂಬಂಧ ಹೊಂದಿರುವ ಗೌರೀಶಂಕರ್‌ರ ಮನದಾಳದ ಮಾತುಗಳನ್ನು ನಿರೂಪಿಸುವ ಹೊಸಪ್ರಯತ್ನ ಮಾಡಿದ್ದೇನೆ. ಗುರುಭವನದ ಹಿನ್ನೆಲೆಯನ್ನು ಗುರುಪ್ರೀತಿಯ ಮುನ್ನೆಲೆಯೊಂದಿಗೆ ಗೌರೀಶಂಕರ್ ನುಡಿದಿದ್ದಾರೆ. ಇದು ಗುರುಗಳ ಚರಣಕ್ಕೆ ನಾವೆಲ್ಲಾ ಅರ್ಪಿಸುವ ಒಂದು ಅಭಿಮಾನದ ಕುಸುಮ ಮಾಲಿಕೆ.

ನೀವು ಎಂದಿನ ಹಾರೈಕೆಯೊಂದಿಗೆ ಸ್ವೀಕರಿಸಿ ನನ್ನ ಪ್ರಯತ್ನವನ್ನು ಬೆಂಬಲಿಸುತ್ತೀರೆಂದು ಖಂಡಿತಾ ನನಗೆ ಗೊತ್ತಿದೆ. ಏಕೆಂದರೆ ನಿಮ್ಮನ್ನು ನಾನು-ನನ್ನನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಿದ್ದೇವೆ. ಹೀಗೆ ಪರಸ್ಪರ ಅರ್ಥಮಾಡಿಕೊಂಡಿದ್ದರಿಂದಲೇ ನಮಗೆ ಅರ್ಥಪೂರ್ಣವಾದುದನ್ನು ಸಾಧಿಸಲು ಸಾಧ್ಯವಾಗುತ್ತಿರುವುದು.

ಗುರುಗಳ ಚರಣಾರವಿಂದಗಳಿಗೆ ಮತ್ತೊಮ್ಮೆ ನಮಿಸಿ ಈ ಮೊದಲ ತೊದಲ ನುಡಿಯನ್ನು ಮುಗಿಸುತ್ತೇನೆ.

-ರಮೇಶ್ ಬೇಗಾರ್

Our Special Thanks to

Mr. Shyam, Guntur and
Mr. Ravishankar, Mysore.

-Ramesh Begar

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸನ್ನಿಧಾನ

ಶ್ರೀ ಸನ್ನಿಧಾನ ಪಾವನತಾಣ
ಶ್ರೀ ಗುರುಭಾರತಿ ತೀರ್ಥರ ಸನ್ನಿಧಿ
ಭಕುತರ ಪಾಲಿಗೆ ರೋಮಾಂಚನ ||ಪ||

ವಿದ್ಯಾತೀರ್ಥರ ಶಿಷ್ಯೋತ್ತಮರು
ವಿದ್ಯಾಧಿದೇವತೆ ನಿಜಭಕ್ತರಿವರು
ಜ್ಞಾನ ಭಾಸ್ಕರ ತೇಜೋರೂಪರು
ಶಾಸ್ತ್ರ ಸಾಗರದ ಶುಭರತ್ನ ಇವರು ||1||

ಅದ್ವೈತ ಮಾರ್ಗದ ಆಧ್ಯಾತ್ಮ ಸಾಧಕ
ಅದ್ಭುತ ಚರಿತ ಆನಂದ ದಾಯಕ
ಕರುಣೆಯ ನೋಟದಿ ವರಗಳ ನೀಡುವ
ಶರಣಾಗತ ಜನ ಪಾಲಕರಿವರು ||2||

ಎಚ್.ಎಂ. ನಾಗರಾಜರಾವ್
ಕಲ್ಕುಟ್ಟೆ, ಶೃಂಗೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ಕನಸಿನ ಮುನ್ನುಡಿ ಗುರುಚರಣಗಳಿಗೆ...

ವಿ.ಆರ್. ಗೌರೀಶಂಕರ್

ನಿರೂಪಕನ ಆರಂಭದ ಮಾತು

ಹ್ಯಾಗೆ ಪ್ರಾರಂಭಮಾಡೋದು?

ಹ್ಯಾಗೇ ಮಾಡಿದರೂ ಆರಂಭದ ಸೂಚನೆ ಇಷ್ಟೇ. ಇದೊಂದು ಯಶಸ್ಸಿನ ಕತೆ. ಗುರುಸೇವೆಯೇ ಉಸಿರಾದ ಆಡಳಿತದ ಧುರೀಣನೊಬ್ಬ ತನ್ನ ಮನಸ್ಸಿಗೆ ಬಂದ ಕಲ್ಪನೆಯೊಂದಕ್ಕೆ ಛಲ, ದೃಢಸಂಕಲ್ಪವೆಂಬ ರೆಕ್ಕೆ-ಪುಕ್ಕ ಕಟ್ಟಿ, ವಿಶ್ವಶ್ರೇಷ್ಠ ಶಂಕರಪೀಠದ ಇತಿಹಾಸದ ಬಾನಂಗಳದಲ್ಲಿ ತೇಲಿಬಿಟ್ಟ ಗುರುಭಕ್ತಿಯೆಂಬ ಪುಷ್ಪಕ ವಿಮಾನ. ನಮ್ಮ ಸಂದರ್ಭದ ಯಾವ ಶ್ರೇಷ್ಠ ಸಂಘಟನೆ ಅಥವಾ ಆಡಳಿತಗಾರರನ್ನು ಕಲ್ಪಿಸಿಕೊಳ್ಳಲೂ ಆಗದ 'ಗುರುಭವನ' ಆಗಸದ ಪುಷ್ಪಕ ವಿಮಾನದಂತೆ! ನರಸಿಂಹವನದಲ್ಲಿ ಕಂಗೊಳಿಸಲಿರುವುದಕ್ಕಾಗಿ ಕ್ಷಣಗಣನೆ... ಹೊರಟ ಕೆಲಸ ಸಾರ್ಥಕವಾಗಿದ್ದಕ್ಕೆ ಕಣ್ಣಂಚಿನಲ್ಲಿ ನೀರೂರಿ ತುಂಬಿಬಂದ ಹೆಮ್ಮೆಯ ಭಾವನೆಯ ತೆಳುವಾದ ತೇವ... ಬದುಕಿನ ದಾರಿತೋರುವ ಗುರುವಿನ ಕುರಿತಾಗಿರುವ ಹಿಮಾಲಯದೆತ್ತರ ಭಕ್ತಿಯ ಧನ್ಯತಾ ಭಾವ... ಇದು ಬರೇ ಕತೆಯಲ್ಲೋ ಅಣ್ಣಾ, ಯಶಸ್ಸಿನ ಕತೆ. ಗುರುಕಾರುಣ್ಯದ ಅಮೃತಸಿಂಚನವೊಂದಿದ್ದರೆ ಯಾವ ಅದ್ಭುತವೂ ನಡೆದೀತೆಂಬ ಕಣ್ಣೆದುರಿನ ಪವಾಡ. ಹಾಗಾಗಿ ಈ ಯಶಸ್ಸಿನ ಕಥೆಗೆ ಸಾವಿರಾರು ಅರ್ಥಗಳಿವೆ, ಸಾವಿರಾರು ಕಾರಣಗಳಿವೆ, ಸಾವಿರಾರು ಐತಿಹಾಸಿಕ ಅನ್ನುವ ಮಹತ್ವವಿದೆ. ಇನ್ನು ಇಷ್ಟೇ.. ನೀವು ಕೇಳೋದು ಕೇಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಭವಿಸೋದು, ಆಸ್ವಾದಿಸೋದು ಒಂದು ವಿಭಿನ್ನವಾದ ರೋಚಕವಾದ ಸಾಧನೆಯೊಂದರ ಕತೆ.. ಮನುಷ್ಯ ಸಾಧನೆಗಳನ್ನು ಉತ್ತುಂಗದಲ್ಲಿ ನಿಂತು ಜಗತ್ತಿಗೆ ಸಾರುವ ಕತೆ. ಎಲ್ಲದಕ್ಕಿಂತ ಇದು ಗುರುಕರುಣೆಯ ಅದ್ಭುತ ಸಾಫಲ್ಯವೊಂದರ ಕತೆ.

ಕತೆ ಸುಮ್ನೆ ಶುರುವಾಗುತ್ತಾ..? ಅದಕ್ಕೊಂದು ಹಿನ್ನೆಲೆ, ಅದಕ್ಕೊಂದು ನೆಲೆಗಟ್ಟು ಬೇಕೇಬೇಕಲ್ವಾ.. ಮುಖ್ಯವಾಗಿ ಈ ಕತೆಗೆ ಇರೋ ಸಾರ್ವತ್ರಿಕ ಆಯಾಮ ಏನು ಅನ್ನೋದು ಬೇಕಲ್ವಾ? ಕಥೆಯನ್ನು ಹೇಳಲು ಅದರಲ್ಲಿ ಪಾಲ್ಗೊಂಡ ಪಾತ್ರಗಳು ಬೇಕಲ್ವಾ? ಈ ಯಶೋಗಾಥೆಯ ಮುಖ್ಯಪಾತ್ರ, ಗುರುಕೈಂಕರ್ಯದ ದೈನ್ಯಸೇವಕ, ಸಾಧನೆಯ ದೈತ್ಯಕಾಯಕ ವಿ.ಆರ್. ಗೌರೀಶಂಕರ್‌ರನ್ನು ಈ ನಿರೂಪಕ ಮಾತಿಗೆಳೆಯುತ್ತಾನೆ. ಮಾತು ಮನದ ಭಾವಗಳಾಗಿ, ಗುರುಭಕ್ತಿಯ ಹರಿವಾಗಿ, ಯಶಸ್ಸಿನೆಡೆಗೆ ಗಮಿಸುತ್ತಿರುವ ಯಶೋನದಿಯಾಗಿ ಧುಮ್ಮಿಕ್ಕಿ ಹರಿಯತೊಡಗುತ್ತದೆ....ಇನ್ನು ನೀವು ಕೇಳುವುದು ಗೌರೀಶಂರ್‌ರ ಮಾತುಗಳನ್ನು

ಕೆಲವು ಆ ಮೆಲುಕುಗಳು...

ಅದು 2001 ಇಸವಿಯ ಶಿವರಾತ್ರಿ ದಿನ. ಛಳಿ ಮಲೆನಾಡನ್ನು ತೀವ್ರವಾಗಿ ಕಾಡಿ ಹೋಗುವ ಸಮಯವೂ ಹೌದು. ಮುಂಜಾನೆ ಪಶ್ಚಿಮಘಟ್ಟ ತುಂಬು ಶ್ರೇಣಿಯನ್ನು ತಬ್ಬಿ ಹಬ್ಬಿರುವ ಇಬ್ಬನಿಯ ಚಾದರ. ಹಾಲಿನ ಸಮುದ್ರದ ನಡುವೆ ಶೃಂಗೇರಿಯ ನಡುವೆ ಶೃಂಗೇರಿಯ ಶ್ರೀ ಸನ್ನಿಧಾನ ಅವಿರ್ಭವಿಸಿದೆಯೇ ಎಂದು ಕೇಳುವಂತ ಮುಂಚಾನೆಯ ಸೊಬಗು. ಇವತ್ತು ಶಿವರಾತ್ರಿ ಎಂದಾದ ಮೇಲೆ ಇಂದು ಈಗ ಶಿವರಾತ್ರಿಯ ಶುಭದಿನದ ಸೂರ್ಯೋದಯ. ನನ್ನ ಮಟ್ಟಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಪ್ರತಿದಿನವೂ ಸೂರ್ಯನ ದರ್ಶನ ಲಭ್ಯವಿದೆ. ಅದು ಈ ಜಗತ್ತನ್ನು ತನ್ನ ಆಧ್ಯಾತ್ಮಿಕ ಕಾಂತಿ ಯಿಂದ ಬೆಳಗುತ್ತಿರುವ ಸೂರ್ಯ. ಆ ಸೂರ್ಯನ ಕಾಂತಿಗೆ ಅನಂತ ಕರು ಣೆಯ ಶಾಂತಿಯಿದೆ. ಶಾಸ್ತ್ರ, ವೇದಾಂತ, ಜ್ಞಾನ, ಆಧ್ಯಾತ್ಮದ ಪ್ರವಿರ ಪ್ರಭೆಯಿದೆ. ನಮ್ಮ ಜಗದ್ಗುರು ನನ್ನ ಪ್ರೀತಿಯ ಗೌರವಾದರದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಸಾಕ್ಷಾತ್ ಸೂರ್ಯಸ್ವರೂಪಿಗಳೇ ಅಲ್ಲವೇ? ಅವರೆದುರು ಯಾರೇ ಒಮ್ಮೆ ನಿಂತರೂ ಎದುರಿನ ಪಾಮರ, ಆ ಸೂರ್ಯತೇಜ ಕಾಂತಿಯ ಮಿಂಚಿನಿಂದ ವಿದ್ಯುತ್ ಸಂಚಾರವನ್ನು ಹೊಂದಿದ ಭಾವವನ್ನು ಅನುಭವಿಸುತ್ತಾನೆ. ನಾನಂತೂ ಪ್ರತಿಬಾರಿ ಗುರುಗಳ ಎದುರು ನಿಲ್ಲುವಾಗ, ಅವರ ಜೊತೆ ನಡೆವಾಗ, ನವರಾತ್ರಿಯ ದರ್ಬಾರ್‌ನ ವೇಳೆ ಅವರ ಕರಸ್ಪರ್ಶಮಾಡುವಾಗಲೆಲ್ಲಾ ಹೊಸ ರೋಮಾಂಚನವೊಂದನ್ನು ಅನುಭವಿಸುತ್ತಲೇ ಇರುತ್ತೇನೆ. ಅದೊಂದು ತೀರದ ದಾಹ. ಗುರುಗಳ ಕೃಪಾ ಸಾಗರದಲ್ಲಿ ಸದಾ ಭಕ್ತಿಯ ಅಲೆಯಾಗುವ ಆಸೆ... ಹಾಗಾಗಿ ನಿಸರ್ಗದ ಸೂರ್ಯ ನಿತ್ಯ ಹುಟ್ಟುತ್ತಾನೆ, ಬೆಳಗುತ್ತಾನೆ. ನಮ್ಮ ಸೂರ್ಯತೇಜದ ಜಗದ್ಗುರುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಸದಾ ಬೆಳಗಿ ಶಿಷ್ಯಕೋಟಿಯನ್ನು ಕಾಯುತ್ತಾರೆ.

ಶಿವರಾತ್ರಿಯ ದಿನದ ಸೂರ್ಯೋದಯವನ್ನು ಯಾಕೆ ವರ್ಣಿಸಿದೆ ಎಂದರೆ, ನಮ್ಮ ಶೃಂಗೇರಿ ಶಾರದಾ ಪೀಠದ ಐತಿಹಾಸಿಕ ಸಂಗತಿಯೊಂದು ಅಂದು ನಿರ್ಧಾರವಾಗಲಿದೆ ಎಂಬುದು ಆ ಬೆಳಗ್ಗಿನ ಸೂರ್ಯೋದಯಕ್ಕೆ ತಿಳಿದಿರಲಿಲ್ಲ. ಶಿವರಾತ್ರಿಯಂದು ವಿಶೇಷ ಪೂಜೆ, ಭಕ್ತರ ಸಡಗರ. ಮಲ್ಲಿಕಾರ್ಜುನ ಬೆಟ್ಟಕ್ಕಂತೂ ಜನಪ್ರವಾಹವೇ ಹರಿದುಬರುತ್ತದೆ. ನಮ್ಮ ಜಗದ್ಗುರುಗಳವರು ಶ್ರೀ ಮಲಹಾನಿಕರೇಶ್ವರನ ಸನ್ನಿಧಿಗೆ ಚಿತ್ತೈಸಿ ವಿಶೇಷ ಪೂಜೆಯಲ್ಲಿ ತೊಡಗುತ್ತಾರೆ. ಸುತ್ತಮೊಳಗುವ ರುದ್ರಪಠಣ, ವೇದಘೋಷ ಮನಸ್ಸಿಗೆ ವಿಶೇಷ ಮುದವನ್ನು ನೀಡುತ್ತದೆ. ಎಲ್ಲದಕ್ಕಿಂತ ಮಿಗಿಲಾಗಿ ಈ ಶಿವರಾತ್ರಿಯ ಹೆಚ್ಚುಗಾರಿಕೆ ಎಂದರೆ ಶ್ರೀ ಶ್ರೀಗಳು ರಾತ್ರಿಯಿಂದ ನಡೆಸುವ ನಾಲ್ಕು ಜಾವದ ಪೂಜೆ. ಇನ್ನಾವ ಇತರೆ ಯತಿಗಳು ಈ ಜಾಗರಣೆಯ ಪೂಜೆಯನ್ನು ವರ್ಷಂಪ್ರತಿ ಆಚರಿಸಿದ ಉದಾಹರಣೆ ನನ್ನ ತಿಳುವಳಿಕೆಗೆ ಅಪರೂಪವೇ. ಅಂಥದ್ದೊಂದು ಅದ್ಭುತ ಕ್ಷಣ ಈ ನಾಲ್ಕು ಜಾವದ ಪೂಜೆ! ನಮ್ಮ ಗುರುಪೀಠ ಪರಂಪರೆಯಲ್ಲಿ ಶ್ರೀ ಶ್ರೀಗಳು ನಡೆಸುವ ಯಾವುದೇ ಪೂಜೆಗಳಿರಲಿ ಅದು ಭಕ್ತಜನರ ರೋಮಾಂಚನದ ಕ್ಷಣ. ಪ್ರತಿದಿನ ಗುರುಗಳು ನಡೆಸುವ ಚಂದ್ರಮೌಳೇಶ್ವರ ಪೂಜೆಗೆ ಜನರು ಕಿಕ್ಕಿರಿದು ಸೇರುತ್ತಾರೆ. ಅದರಲ್ಲೂ ಶಿವರಾತ್ರಿಯ ಈ ವಿಶೇಷಪೂಜೆಗೆ ಎಂದ ಮೇಲೆ ಕೇಳಬೇಕೇ.

ಆ ಶಿವರಾತ್ರಿ ನನಗೆ ಸ್ಪಷ್ಟವಾಗಿ ನೆನಪಿದೆ. ಗುರುಗಳ ಪೂಜೆಗೆ ನರಸಿಂಹವನದ ಸಚ್ಚಿದಾನಂದ ವಿಲಾಸದಲ್ಲಿ ಸಾಸುವೆಕಾಳು ಬೀಳಿಸಲೂ ಜಾಗವಿಲ್ಲದ ಪರಿಸ್ಥಿತಿ. ಅಷ್ಟೊಂದು ಕಿಕ್ಕಿರಿದ ಆಸ್ತಿಕ ಸಮೂಹ ಗುರುಗಳ ದರ್ಶನವಂತಿರಲಿ ಇಣುಕಿ ನೋಡಿದರೂ ಏನೂ ಕಾಣಲಾಗದ ಸ್ಥಿತಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದೆಷ್ಟೋ ಜನರಿಗೆ ನಿರಾಸೆ. ಪ್ರಪಂಚದ ಯಾವುದೋ ಮೂಲೆಯಿಂದ ಶೃಂಗೇರಿಗೆ ಬಂದಿರಬಹುದಾದ ಭಕ್ತನೊಬ್ಬನ ಶ್ರೀ ಶ್ರೀಗಳ ಪೂಜೆ ನೋಡುವ ಆಸೆಯಿಂದಾಗಿ ಬರೇ ಇರುಕಟ್ಟಾದ ಜಾಗದ ಸಮಸ್ಯೆಯಿಂದಾಗಿ ನಿರಾಸೆಯಾಗಿ ಹೋಯ್ತೆ? ಹೌದು ಇಲ್ಲಿ ನಮ್ಮ ಗುರುಗಳ ಪೂಜೆ ನೋಡಲೆಂದೇ ಬರುವವರಿಗಾಗಿ ಒಂದು ದೊಡ್ಡ ಹಾಲ್‌ನ ಅವಶ್ಯಕತೆ ಇದೆ. ನರಸಿಂಹವನದ ಸಚ್ಚಿದಾನಂದ ವಿಲಾಸದಲ್ಲಿ ಆ ಜನಸ್ತೋಮದ ನಡುವೆ ನನ್ನ ಮನಸ್ಸಿಗೆ ಥಟ್ಟನೆ ಹೊಳೆದ ಯೋಚನೆ, ಜೊತೆಜೊತೆಗೇ ಒಂದು ನಿರ್ಧಾರ, ಇಲ್ಲೊಂದು ವಿಶಾಲ ಪೂಜಾಗೃಹ ಬೇಕು. ಹಾಗೆ ನನಗೆ ಆಗಾಗ ಥಟ್ಟನೆ ಹೊಳೆವ ಯೋಚನೆಗಳೂ ನಮ್ಮ ಗುರುಗಳ ಸಂಕಲ್ಪವೇ ಆಗಿರುತ್ತದೆ. ಅದು ನಮ್ಮ ಹಿಂದಿನ ಎಲ್ಲಾ ಯಶಸ್ವೀ ಯೋಜನೆಗಳಲ್ಲಿ ಈ ಅಘೋಷಿತ ನಿಯಮದ ಅನುಭವವನ್ನು ನಾನು ಹೊಂದಿದ್ದೇನೆ.

ಶಿವರಾತ್ರಿಯ ಮಾರನೇ ದಿನ ಮುಸ್ಸಂಜೆಯ ಸಮಯವಿರಬಹುದು. ಪರಮಪೂಜ್ಯರ ಭೇಟಿಗೆಂದು ನರಸಿಂಹವನದ ಕಡೆ ಹೊರಟಿದ್ದೆ. ಅದು ನಿತ್ಯದ ಭೇಟಿ. ಒಂದಿಡೀ ಸಂಸ್ಥಾನದಲ್ಲಿ ಏನಾಗುತ್ತಿದೆ, ಹೋಗುತ್ತಿದೆ ಎನ್ನುವುದನ್ನು ಶ್ರೀ ಶ್ರೀಗಳಿಗೆ ವಿವರಿಸುವ ದಿನಚರಿ. ಆ ದಿನ "ವಿದ್ಯಾತೀರ್ಥಸೇತು"ವಿನಲಿ ನಡೆದು ಹೋಗುತ್ತಿರುವಾಗಲೂ ನನ್ನ ಮನಸ್ಸಿನಲ್ಲಿ ಮುತ್ತಿಕೊಂಡಿದ್ದು ಒಂದೇ ಭಾವ. ಗುರುದರ್ಶನಕ್ಕೆ-ಗುರುಪೂಜೆಗೆ ಒಂದು ಸಭಾಗೃಹ ಬೇಕು. ಇದನ್ನು ಇಂದು ಶ್ರೀ ಶ್ರೀಗಳಲ್ಲಿ ಹೇಳಿಬಿಡಬೇಕು.. ಹೌದು ಅವರು ನಮ್ಮ ಭಕ್ತರ ಕಣ್ಮಣಿ.. ಭಕ್ತರ ಕಣ್ಣಿಗೆ ಕಣ್ಮಣಿಯೇ ಒಮ್ಮೊಮ್ಮೆ ಕಾಣದಂತ ವ್ಯವಸ್ಥೆಯೊಂದು ಬದಲಾಗಿಬಿಡಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತಿಮ ಮುದ್ರೆ ಒತ್ತಿದರು

"ನಿನ್ನೆ ನಿಮ್ಮ ಪೂಜೆಗೆ ಸೇರಿದ್ದ ಜನರನ್ನು ನೋಡಿದಿರಲ್ಲಾ ಸ್ವಾಮೀಜಿ. ತಮ್ಮ ಪೂಜೆಯನ್ನು ವೀಕ್ಷಿಸಲೆಂದೇ ಬರುವ ಜನರಿಗಾಗಿ ಒಂದು ಪೂಜಾಗೃಹದ ಅಗತ್ಯವಿದೆ ಅಂತ ಅನ್ನಿಸ್ತಾ ಇದೆ. ನಿಮ್ಮೆಡೆಗೆ ಬರುವ ಭಕ್ತರ ಸಂಖ್ಯೆ ಈಗ ಊರ್ಧ್ವಮುಖಿ. ಅಂಥಹ ಪೂಜಾಗೃಹ ವೊಂದರ ನಿರ್ಮಾಣಕ್ಕೆ ನೀವು ಒಪ್ಪಿದರೆ ಶಿಷ್ಯವೃಂದ ಸುಖಿ.." ಗುರುಗಳು ಅರೆಕ್ಷಣ ಕಣ್ಣುಮುಚ್ಚಿ ಮತ್ತೆ ದೃಢವಾಗಿ ನನ್ನನ್ನು ದಿಟ್ಟಿಸಿ ಹೇಳಿದರು. ಅದು ಒಂದೇ ಮಾತು "ನನ್ನ ಆಶೀರ್ವಾದವಿದೆ." ಜಗತ್ತನ್ನೇ ಗೆದ್ದ ಸಂಭ್ರಮದಲ್ಲಿ ನರಸಿಂಹವನದಿಂದ ಹೊರಬಿದ್ದೆ. ಏಕೆಂದರೆ ನಾನು ಗುರುಗಳ ಆಶೀರ್ವಾದದ ಬಲವನ್ನು ಹೊತ್ತು ಬಂದಿದ್ದೆ. ಹೀಗೆ 2001 ನೇ ಇಸವಿಯ ಶಿವರಾತ್ರಿಯ ಸೂರ್ಯೋದಯದಿಂದ ಮೊದಲ್ಗೊಂಡ ಒಂದು ಕನಸು ನಿಧಾನವಾಗಿ ಟಿಸಿಲೊಡೆದು ಹೆಮ್ಮರವಾಗುತ್ತಾ ಹೋಗುವಂತಾಯಿತು.

ಅದೊಂದು ಸ್ವಾರಸ್ಯದ ಪ್ರಕರಣ.

ಶಿವರಾತ್ರಿ ಕಳೆದು ಒಂದೆರಡು ತಿಂಗಳಲ್ಲಿ ನಮ್ಮ ವಿ.ಐ.ಪಿ. ಗೆಸ್ಟ್ ಹೌಸ್‌ನ ಉದ್ಘಾಟನಾ ಸಮಾರಂಭ ವೊಂದು ನಡೆಯಿತು. ಅಂದು ಶ್ರೀ ಶ್ರೀಗಳವರು ಆ ಹೊಸ ಕಟ್ಟಡಕ್ಕೆ ಬಂದಿದ್ದರು. ಒಂದೆರಡು ಕಾಟೇಜ್

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನು ತೋರಿಸಲೆಂದು ಗುರುಗಳನ್ನು ಕರೆದೊಯ್ದೆವು. ಆಗ ಆ ಕಾಟೇಜ್ ಗಳ ಆಧುನಿಕ ತಂತ್ರಜ್ಞಾನ, ಸುವ್ಯವಸ್ಥೆ ಇವನ್ನೆಲ್ಲಾ ನೋಡಿದ ಶ್ರೀ ಶ್ರೀಗಳು ತಮಾಷೆಯಾಗಿ ಒಂದು ಮಾತು ಹೇಳಿದರು. "ಏನ್ರೀ ಅಧಿಕಾರಿಗಳೇ, ಎಲ್ಲಾ ಕಟ್ಟಡಗಳೂ ಇಷ್ಟೊಂದು ವೈಭವೋಪೇತವಾಗಿದೆ. ನಮ್ಮ ಸಚ್ಚಿದಾನಂದ ವಿಲಾಸ ಮಾತ್ರ ಹಾಗೇ ಇದೆ.."

ಸದಾ ನಾರುಮಡಿ ತೊಡುವ, ಚಾಪೆ ಮೇಲೆ ವಿರಮಿಸುವ, ದಿನದ ಹೆಚ್ಚಿನ ವೇಳೆ ಶಾಸ್ತ್ರಗ್ರಂಥಗಳ ನಡುವೆ ಕಳೆವ ಅತೀ ಸರಳ ಜೀವನವಿಧಾನದ ಜಗದ್ಗುರುಗಳು ಎಂದೂ ವೈಭವವನ್ನು ಅಪೇಕ್ಷಿಸಿದವರಲ್ಲ, ಅಪೇಕ್ಷಿಸುವುದೂ ಇಲ್ಲ. ಅವರ ತಮಾಷೆಯ ಹಿಂದೊಂದು ತೀಕ್ಷ್ಣತೆ ಸದಾ ಇದ್ದೇ ಇರುತ್ತದೆ. ಅದು ಆಗಲೇ ನನಗೆ ಹೊಳೆದಿದ್ದು. ಹೌದು ಸಚ್ಚಿದಾನಂದ ವಿಲಾಸ ಶಿಥಿಲವಾಗುತ್ತಿದೆ. ಮುಖ್ಯವಾಗಿ ಪ್ರಕೃತಿಯ ಧಾಳಿಯಿಂದ ಅದನ್ನು ರಕ್ಷಿಸುವುದು ಹರಸಾಹಸದ ಕೆಲಸ. ಸಿಡಿಲು, ಮಳೆಗಳಿಂದ ತೊಂದರೆ ಪ್ರತೀವರ್ಷ ಇರುತ್ತದೆ. ಒಮ್ಮೆ ಬಂದ ಮಳೆ ಗಾಳಿಯಿಂದ ಹೆಂಚುಗಳು ಹಾರಿಹೋಗಿ ಅವರ ಅಮೂಲ್ಯಲೈಬ್ರರಿಗೆ ತೊಂದರೆಯಾಗಿದ್ದು ಕಣ್ಣೆದುರಿಗೇ ಇತ್ತು. ಆದ್ದರಿಂದ ಶ್ರೀ ಶ್ರೀಗಳ ವಾಸಸ್ಥಾನಕ್ಕೆ ಅತ್ಯಂತ ಯೋಗ್ಯವಾದ ಮತ್ತು ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ ಸುವ್ಯವಸ್ಥಿತ ನಿವಾಸವೊಂದು ಈಗಿನ ಅನಿವಾರ್ಯದ ಅಗತ್ಯ. ಹಾಗಾಗಿ ಈಗಾಗಲೇ ಯೋಚಿಸಿದ ಪೂಜಾಗೃಹದ ಜೊತೆ ಶ್ರೀ ಶ್ರೀಗಳ ನಿವಾಸವೂ ಸೇರಿದರೆ ಅದೊಂದು ಪೂರ್ಣತೆಯನ್ನು ಹೊಂದಿದ ಕೆಲಸವಾಗುತ್ತದೆ. ಗುರುಗಳ ಪೂಜಾಮಂದಿರ ಮತ್ತು ನಿವಾಸವನ್ನು ಹೊಂದಿದ ಒಂದು ಕಟ್ಟಡ ಆಗಲೇಬೇಕು ಎಂದು ಅತ್ಯಂತ ತೀವ್ರವಾಗಿ ಅನ್ನಿಸಿದ ಆ ಕ್ಷಣದಲ್ಲಿ ಹುಟ್ಟಿತು ಮನಸ್ಸಿನಲ್ಲಿ ಆ ಗುರುಮಂದಿರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಮಂದಿರವೆಂದರೆ ಅದು ಹೇಗಿರಬೇಕು?

ಹೀಗೊಂದು ಪ್ರಶ್ನೆ ನನ್ನ ಮನಸ್ಸನ್ನು ಕೆದಕತೊಡಗಿತು. ಇದು ನಮ್ಮ ಗುರುಗಳಿಗಾಗಿ ನಾವು ಕಾಣುತ್ತಿರುವ ಕನಸು. ಅದು ಅಷ್ಟೇ ವಿಶಿಷ್ಟತೆಯಿಂದ ಕೂಡಿರಬೇಕು. ಏಕೆಂದರೆ ಗುರುಭವನವನ್ನು ನಾವು ಗುರುಗಳಿಗೆ ಅರ್ಪಿಸುತ್ತಿದ್ದೇವೆ. ಇದು ಶ್ರೀ ಶಾರದಾಪೀಠದ ಪರಂಪರೆಯಲ್ಲಿಯೇ ಅತ್ಯಂತ ಮಹತ್ವದ ಐತಿಹಾಸಿಕ ಸಂಗತಿಯಾಗಬೇಕು. ಗುರುಭವನ ಶೃಂಗೇರಿಗೆ ಬರುವ ಯಾತ್ರಾರ್ಥಿಗಳ ವಿಶೇಷ ಆಕರ್ಷಣೆಯ ತಾಣವಾಗಬೇಕು. ನಾವು ಏನೇ ಮಾಡಿದರೂ ಅದು ವಿಶಿಷ್ಟವಾಗಿರಬೇಕು.

ಒಂದು ಕ್ಷಣ ಸುಮ್ಮನೆ ಯೋಚಿಸಿ ನೋಡಿ. ಶಂಕರಾಚಾರ್ಯರು ಹೊಸದೇನನ್ನೂ ಹೇಳಲಿಲ್ಲ. ಬದಲಾಗಿ ಇದ್ದ ವಿಚಾರವನ್ನೇ ಹೊಸದಾಗಿ ಹೇಳಿದರು. ಆ ಹೇಳುವ ಕ್ರಮದಲ್ಲಿ ಹೊಸತನವನ್ನು ಕಂಡುಕೊಂಡರು. ಆ ಪರಂಪರೆಯಲ್ಲಿ ಬಂದ ನಮ್ಮ ಸಂಸ್ಥಾನ ಈಗ ಮಾಡುತ್ತಿರುವುದೂ ಇಷ್ಟನ್ನೇ. ಭೋಜನ ಶಾಲೆಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ. ಅದರ ಅಪಯಶಸ್ಸಿನ ಬಗ್ಗೆ ಮಾತನಾಡಿದವರಿದ್ದರು. ಅದರ ಸ್ವಚ್ಛತೆ ಸಾಧ್ಯವೇ ಆಗದ ಮಾತು ಎಂದು ಮೂಗು ಮುರಿದವರಿದ್ದರು. ಅಂಥಾ ಸಂದೇಹಗಳ ಮಧ್ಯೆ ಸಿದ್ಧವಾದ ಅನ್ನಛತ್ರ ಈಗ ದೇಶದಲ್ಲೇ ವಿಭಿನ್ನವಾದ ಸ್ಥಾನ ಪಡೆದಿದೆ. ನಮ್ಮ ಪಾಠಶಾಲೆಯ ಕಟ್ಟಡ, ಅದ್ವೈತ ರಿಸರ್ಚ್ ಸೆಂಟರ್ ಎಲ್ಲವೂ ಇದೇ ವಿಷಯವನ್ನು ಸ್ಪಷ್ಟವಾಗಿ ಸಾರಿಹೇಳುತ್ತದೆ. ಪಾಠಶಾಲೆಯ ಕಟ್ಟಡ ವಿನ್ಯಾಸಕ್ಕಾಗಿ ಪ್ರಶಸ್ತಿಗಳೇ ಬಂದಿವೆ. ಕಟ್ಟಡಗಳನ್ನು ಬೇರೆಯವರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಟ್ಟಿಸಿಹಾಕಿದ್ದಾರೆ. ನಿಮ್ಮದೇನು ವಿಶೇಷ ಎಂದು ಕ್ಯಾತೆ ತೆಗೆಯುವವರಿಗೆ ನಮ್ಮ ವೈವಿಧ್ಯತೆಗಳೇ ಉತ್ತರ ಕೊಡುತ್ತದೆ. ಇದನ್ನೆಲ್ಲಾ ಅಹಂಕಾರದ ಮಾತೆಂದು ತಿಳಿಯಬೇಕಾಗಿಲ್ಲ. ವಾಸ್ತವದ ಭೂತಕನ್ನಡಿಯಿಂದ ನೋಡಿದರೆ ಈ ಅಹಂಕಾರ ಮತ್ತು ಹೆಮ್ಮೆಯ ನಡುವಿನ ಗೆರೆ ಗೊತ್ತಾದೀತು. ಹೆಮ್ಮೆ ಪಡುವ ಸಂಗತಿಯನ್ನು ಎದೆಯುಬ್ಬಿಸಿ, ಕಣ್ಣರಳಿಸಿ ತಾನೇ ಹೇಳಬೇಕು. ತೆಂಡೂಲ್ಕರ್ 75 ಬಾಲ್‌ಗೆ 99 ರನ್ ಹೊಡೆದ ಸಂತೋಷವನ್ನು ಇನ್ನು ಹ್ಯಾಗೆ ತಾನೆ ವ್ಯಕ್ತಪಡಿಸಬಲ್ಲ?

ಆದ್ದರಿಂದ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಪರಂಪರೆಯನ್ನು ಸಂರಕ್ಷಿಸುವ ಒಂದು ಹೊಸ ಪರಿಕಲ್ಪನೆ ನಮ್ಮ ಗುರುಗಳ ಕಾಲದಿಂದ ಚಾಲ್ತಿಗೆ ಬಂತು. ಈ ಪರಿಕಲ್ಪನೆ ನಮ್ಮ ಸಂಸ್ಥಾನಕ್ಕೆ ವಿಶ್ವಮಾನ್ಯತೆಯನ್ನೇ ತಂದು ಕೊಡುತ್ತಾ ಇದೆ. ಈ ಒಂದು ಗಟ್ಟಿ ಹಿನ್ನೆಲೆಯಿಂದಲೇ ನಾನು ಗುರುಭವನವನ್ನು ಕಲ್ಪಿಸಿಕೊಳ್ಳಬೇಕಿತ್ತು. ಹಾಗಾಗಿ ಈ ಗುರುಭವನ ಹೇಗಿರಬೇಕು ಎಂದು ನಿರ್ಧರಿಸುವುದೇ ಒಂದು ಸವಾಲಾಗಿ ಪರಿಣಮಿಸಿತು. ಒಂದು ಹೊಸ ಸವಾಲನ್ನು ಎದುರಿಸಲು ನನಗಂತೂ ನಿರಂತರವಾದ ಕಾತರತೆ ಇದ್ದೇ ಇರುತ್ತದೆ. ಗುರುಭವನ ನಾವು ಗುರುಗಳಿಗೆ ಕೊಡಬಹುದಾದ ಅತಿದೊಡ್ಡ ಕೊಡುಗೆಯಾಗಬೇಕು. ಹಾಗೆ ಆಗಬೇಕಾದರೆ ಇದನ್ನು ಹೇಗೆ ರೂಪಿಸಬೇಕು. ಆಗ ನೆನಪಾದರು ಸುಂದರಂ.. ಆರ್. ಸುಂದರಂ.

ಸುಂದರಂ ಜೊತೆ ಕುಳಿತು ಸುಂದರ ಕನಸೊಂದರತ್ತ..

ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಕಟ್ಟಡಗಳ ವಿನ್ಯಾಸದ ತಂತ್ರಜ್ಞಾನಿ ಆರ್. ಸುಂದರಂ ಬೆಂಗಳೂರಿನವರು. ನೀವು ಬೆಂಗಳೂರಿನ ಖ್ಯಾತ ಫ್ಲೈಓವರ್‌ನ್ನೋ, ಕಂಠೀರವ ಒಳಾಂಗಣ ಕ್ರೀಡಾಂಗಣವನ್ನೊ

Sri Vidyabharathi Book Centre, Sringeri

CC-O. In Public Domain. Digitized by eGangotri



ನೋಡಿರಬಹುದು. ಇದನ್ನೆಲ್ಲಾ ಪ್ಲಾನ್ ಮಾಡಿದವರು ಈ ಸುಂದರಂ. ಇಂದು ಇಡೀ ಪ್ರಪಂಚದಲ್ಲಿ ಕಟ್ಟಡ ತಂತ್ರಜ್ಞಾನ ದಿನದಿಂದ ದಿನಕ್ಕೆ ನಾಗಾಲೋಟದಲ್ಲಿ ಸಾಗುತ್ತಿದೆ. ದಿನ ಕ್ಕೊಂದು ಹೊಸ ತಂತ್ರಜ್ಞಾನ ಉಗಮ ವಾಗುತ್ತಿರುತ್ತದೆ. ಪ್ರಿಕ್ಯಾಸ್ಟ್ ರೂಫಿಂಗ್ ಟೆಕ್ನಾಲಜಿ ಇಂದು ಅತ್ಯಂತ ಜನಪ್ರಿಯವಾದ ಆದರೆ ಅಷ್ಟೇ ಕಠಿಣವಾದ ತಂತ್ರಜ್ಞಾನ. ಪ್ರಿಕ್ಯಾಸ್ಟ್‌ರೂಫಿಂಗ್ ತಂತ್ರಜ್ಞಾನದ ವಿಶೇಷ ಆಕರ್ಷಣೆಯೆಂದರೆ ನೆಲಕಂಬಗಳ ನೆರವಿಲ್ಲದೆ ವಿಶಾಲವಾದ ರೂಫಿಂಗ್ ವ್ಯವಸ್ಥೆ ಹರಡಿಕೊಂಡು, ನೋಡುವ ಕಣ್ಣಿಗೆ ವೈಭವವನ್ನು ರಾಚುತ್ತದೆ. ಈ ತಂತ್ರಜ್ಞಾನದ ಸ್ಟ್ರಕ್ಚರ್ ಇಂಜನಿಯರ್ ಆಗಿ ವಿಶ್ವದಲ್ಲೇ ಹೆಸರುಮಾಡಿದ ಸುಂದರಂ ನಮ್ಮ ಗುರುಭವನಕ್ಕೆ ನಿಜವಾದ ಕಟ್ಟಡ ವಿನ್ಯಾಸ ತಂತ್ರಜ್ಞಾನಿ ಎಂದು ತೀರ್ಮಾನಿಸಿ ಅವರೊಂದಿಗೆ 5 ರಿಂದ 6 ಬಾರಿ ಮತ್ತೆಮತ್ತೆ ಮಾತುಕತೆಯಲ್ಲಿ ತೊಡಗಿದೆ.

ಪ್ರೀತಿಯೊಂದಿದ್ದರೆ ಪ್ರಪಂಚದಲ್ಲಿ ಏನೂ ಸಾಧಿತವಾಗ ಬಹುದಂತೆ. ಗುರುಸೇವೆಗೆ, ಸಂಸ್ಥಾನದ ನೆರವಿಗೆ ಅಂಥಾ ಪ್ರೀತಿಯೊಂದು ಬೇಕೇ ಬೇಕು. ಅಭಿಮಾನ ಭಕ್ತಿಗಳಿರಬೇಕು. ಸುಂದರಂ ನನ್ನ ತೀರಾ ಆತ್ಮೀಯರು ಅನ್ನುವ ಹೊತ್ತಿಗೇ ಅವರು ಶೃಂಗೇರಿ ಮಠದ ಪರಮ ಭಕ್ತರೂ ಹೌದು. ಪ್ರಪಂಚದಲ್ಲೇ ವಿಶಿಷ್ಟ ಅನ್ನುವ ಗುರುಮಂದಿರದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿನ್ಯಾಸ ಮಾಡಿಕೊಡಿ.. ಎಂದೆ. ಸುಂದರಂ ಹತ್ತಾರು ಸ್ಕೆಚ್‌ಗಳನ್ನು ಹಾಕಿದರು. ನಂತರ ಈ ವಿನ್ಯಾಸವೇ ಓ.ಕೆ. ಆಯ್ತು. ಅದನ್ನು ಹತ್ತಾರು ಬಾರಿ ಒಟ್ಟಿಗೆ ಕುಳಿತು ಪರಿಷ್ಕರಿಸಿದೆವು. ಏಕೆಂದರೆ ನಾವು ಗಮಿಸಬೇಕಾದ ದಾರಿ ಅತ್ಯುನ್ನತ ಸಾಧನೆಯೆಡೆಗೆ ಅನ್ನುವುದನ್ನು ನಾನು ಸ್ಪಷ್ಟವಾಗಿ ತಿಳಿದಿದ್ದೆ.

ವಿನ್ಯಾಸವೊಂದು ಸಿದ್ಧವಾದರೆ ಮುಗಿಯಿತೇ ಕಥೆ? ಅದು ಕಥೆಯ ಕೇವಲ ಆರಂಭದ ಪುಟಗಳಷ್ಟೇ.. ಅದನ್ನು ನಿರ್ಮಿಸುವ ಜವಾಬ್ದಾರಿಯನ್ನು ಒಂದು ಯೋಗ್ಯ ಕಂಪನಿಗೆ ನೀಡಬೇಕಾಗಿತ್ತು. ಸುಂದರಂನಂತಹ ನಂ.1 ಕಟ್ಟಡ ವಿನ್ಯಾಸಕನಿದ್ದಂತೆ. ಪ್ರಥಮ ಪಂಕ್ತಿಯ ಕಂಟ್ರಾಕ್ಟ್ ಸಂಸ್ಥೆ ಚೆನ್ನೈನ ಕನ್ಸಾಲಿಡೇಟೆಡ್ ಕನ್ಸ್‌ಟ್ರಕ್ಷನ್ ಕನ್ಸೋರ್ಟಿಯಂ ಲಿಮಿಟೆಡ್‌ಗೆ ಈ ಜವಾಬ್ದಾರಿಯನ್ನು ವಹಿಸಿದೆ.

ಆ ದಿನ..

ಹೌದು. ಕಂಡ ಕನಸು, ಮನದಾಳದೊಳಗಿರುವ ಗುರು ಪ್ರೀತಿ, ಸಾಧನೆಯ ಛಲ, ವಿಭಿನ್ನತೆಯ ತವಕ.. ಇವೆಲ್ಲವೂ ನನಸಾಗುವ, ಅಮೂರ್ತತೆಯಿಂದ ಮೂರ್ತತೆ ಯೆಡೆಗೆ ಸಾಗುವ ದಿನ ಬಂದೇ ಬಿಟ್ಟಿತು. ಆ ದಿನ ಡಿಸೆಂಬರ್ 5, 2001.

ಆದಿನ ನಮ್ಮ ಗುರುಭವನ ಕಟ್ಟಡದ ಶಂಕುಸ್ಥಾಪನೆ. ಜಗದ್ಗುರು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ. ಶ್ರೀ ಶ್ರೀಗಳ ಸಂಕಲ್ಪದ ತಪಃಶಕ್ತಿಯ ಮಹಾನ್ ಪ್ರಭಾವಳಿಯ ನಡುವೆ ಈ ಗುರುನಿವಾಸ ಕಟ್ಟಡದ ನಿರ್ಮಾಣ ಪ್ರಾರಂಭೋತ್ಸವ ನಡೆದೇಬಿಟ್ಟಿತು. ಕನಸು ಕರಗಿ ವಾಸ್ತವದ ನೆಲೆಗಟ್ಟಿನಲ್ಲಿ ಕನಸಿನ ರೂಪಗಟ್ಟಿಯಾಗಿ ಎದ್ದು ನಿಲ್ಲತೊಡಗಿತು.

ಸಾಮಾನ್ಯವಾಗಿ ಯಾವುದೇ ಕಟ್ಟಡ ಅಥವಾ ಒಂದು ಕೆಲಸವನ್ನು ನಾನು ಪೂರೈಸಬೇಕಾದರೆ ಅದಕ್ಕೊಂದು ನಿಗದಿತ ಸಮಯವನ್ನು ಹಾಕಿಕೊಳ್ಳುತ್ತೇನೆ. ಇದರಿಂದ ಸದಾ ಶಿಸ್ತಿನ ಜೊತೆಗೆ ನಿರಂತರ ಒಳ ಎಚ್ಚರವನ್ನು ಹೊಂದಿರಲು ಸಾಧ್ಯವಾಗುತ್ತದೆ. ಆದರೆ ವಿಚಿತ್ರ ಎಂದರೆ ಅಂತಹ ಕೆಲಸಗಳೆಲ್ಲಾ ವೇಳಾಪಟ್ಟಿಗಿಂತ ಮೊದಲೇ ಸಾಧಿತವಾಗಿರುತ್ತದೆ. ಇದೆಲ್ಲವೂ ದೇವಿ ಶಾರದೆಯ ಚಿತ್ತವಿರಬೇಕು, ಶ್ರೀ ಶ್ರೀಗಳ ಆಶೀರ್ವಾದವಿರಬೇಕು.. ಈ ಗುರುನಿವಾಸವೂ ಹಾಗೆ. ಅಂದು ಕೊಂಡಿದ್ದು 18 ತಿಂಗಳು ಎಂದು, ಮುಗಿದಿರುವುದು 16 ತಿಂಗಳಿಗೇ...

ಹಲವಾರು ಪ್ರಥಮಗಳ ಈ ಮಂದಿರ



ನಮ್ಮ ಗುರು ನಿವಾಸ ನೂರಾರು ಕಾರಣಗಳಿಗೆ ಹೊಸತನದಲ್ಲಿ ವಿಭಿನ್ನತೆ ಯನ್ನು ಹೊಂದಿ ಪ್ರಥಮ ಸಾಲಿನಲ್ಲಿ ನಿಲ್ಲುತ್ತದೆ. ಇದರ ವೈಶಿಷ್ಟ್ಯತೆಗಳು ಬೆರಗು ಮೂಡಿಸುವಂಥದ್ದು. ಇಲ್ಲೊಂದು ಮಾತು ಹೇಳಿಬಿಡ್ತೇನೆ. ನಾವೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿದ ಕೆಲಸವೊಂದನ್ನು ಅದ್ಭುತ ಅದ್ಭುತ ಎಂದರೆ ಆತ್ಮಪ್ರಶಂಸೆ ಎಂದು ಹೀಗಳೆಯುವವರ ಸಂಖ್ಯೆ ಕಡಿಮೆಯಿಲ್ಲ. ಆದರೆ ಪ್ರತಿ ಸಭೆ ಸಮಾರಂಭಗಳಲ್ಲಿ ನಾನೊಂದು ಮಾತು ಹೇಳ್ತೇನೆ. ಒಳ್ಳೇ ಕೆಲಸಗಳಿಗೆ ನಮ್ಮಲ್ಲಿ ಪ್ರಚಾರ ಕಡಿಮೆ. ಅದನ್ನು ಜನರಿಗೆ ಮುಟ್ಟಿಸಲು ಹತ್ತಾರು ಬಾರಿ ಹೇಳಬೇಕು. ಜನರಿಗೆ ತಲುಪಿಸಬೇಕು. ಏನೇ ಇರಲಿ ಈ ಗುರುಭವನ ಮೇಲ್ನೋಟಕ್ಕೆ ನೋಡಿದರೆ ಏನೂ ಇಲ್ಲ ಇದರೊಳಗೆ ಎಂದೂ ಕೆಲವರಿಗೆ ಕಾಣಬಹುದು. ಆದರೆ ಇಂಥದ್ದೊಂದು ಅಪರೂಪದ ತಂತ್ರಜ್ಞಾನದ ಕಟ್ಟಡವನ್ನು ವೀಕ್ಷಿಸಲು ಕೂಡಾ ಒಂದಷ್ಟು ಮಾನಸಿಕ ಸಿದ್ಧತೆ ಮಾಡಿರಬೇಕಾಗಬಹುದು. ಇಂತಹ ಕೆಲ ಅಪರಿಚಿತ ಸಂಗತಿಗಳು ನಿಮಗೆಲ್ಲಾ ತಿಳಿಯಲೆಂದೆ ಈ ಪುಸ್ತಕ ಪ್ರಕಟಣೆಗೆ ಅಭಿಮಾನ ಬಳಗಕ್ಕೆ ಸಮ್ಮತಿ ನೀಡಿದೆ. ಅದಕ್ಕಾಗಿ ಗುರುನಿವಾಸದ ವೈಶಿಷ್ಟ್ಯಗಳನ್ನು ಇಲ್ಲಿ ಪಟ್ಟಿ ಮಾಡುತ್ತಿದ್ದೇನೆ.

1. ವಾಸ್ತು ಶಾಸ್ತ್ರವನ್ನು ಕಿಂಚಿತ್ತೂ ಬಿಡದೆ ರೂಪುಗೊಂಡ ಗುರುಮಂದಿರ ಇದು.

2. 1500 ಜನ ಒಮ್ಮೆಲೇ ಒಟ್ಟಿಗೆ ಕುಳಿತುಕೊಳ್ಳಬಹುದಾದ ಬೃಹತ್ ಸಭಾಗೃಹವಿದೆ. ಆದರೆ ಈ ಬೃಹತ್‌ಭವ್ಯ ಸಭಾಗೃಹ ಅಥವಾ ಪೂಜಾಮಂದಿರವನ್ನು ಒಂದೇ ಒಂದು ಕಂಬಗಳ ನೆರವೂ ಇಲ್ಲದೇ ನಿರ್ಮಿಸಲಾಗಿದೆ. ಇದಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. 10,000 ಚದರ ಅಡಿಯಲ್ಲಿ ಈ ಸಭಾಗೃಹದ ವ್ಯಾಪ್ತಿ ಹರಡಿಕೊಂಡಿದೆ. ಇದು ಕಟ್ಟಡ ವೀಕ್ಷಕರನ್ನು ನಿಬ್ಬೆರಗಾಗಿಸುತ್ತದೆ.

3. ಗುರುನಿವಾಸದ ಮೇಲಿರುವ ಕಳಶ ಪ್ರಪಂಚದಲ್ಲೇ ಅತಿ ಎತ್ತರವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲಶವಾಗಿದ್ದು ಸುಮಾರು ಹದಿನೈದುವರೆ ಅಡಿಗೂ ಹೆಚ್ಚು ಎತ್ತರದ ಭವ್ಯತೆಯನ್ನು ಹೊಂದಿದೆ. ಕಳಶದ ಕಲರ್ ಕಾಂಬಿನೇಶನ್, ವಿನ್ಯಾಸವನ್ನು ನುರಿತ ಕೆಲಸಗಾರರು ನಿರ್ವಹಿಸಿದ್ದಾರೆ.

4. ಲೈಟಿಂಗ್ ವ್ಯವಸ್ಥೆಯಲ್ಲಿ ಒಂದು ನೂತನ ಕ್ರಾಂತಿಕಾರಕವಾದ ಸಾಧನೆಯನ್ನೇ ಈ ಕಟ್ಟಡದಲ್ಲಿ ಮಾಡಲಾಗಿದೆ. ಚಾಂಡಲಿಯರ್ ಎಂದು ಕರೆಯಲ್ಪಡುವ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. 14 ಅಡಿ ಎತ್ತರ, 14 ಅಡಿ ಸುತ್ತಳತೆಯಲ್ಲಿ ರೂಪುಗಳ್ಳಲಿರುವ ಈ ಲೈಟಿಂಗ್ ವ್ಯವಸ್ಥೆ ಅಷ್ಟು ದೊಡ್ಡ ಹಾಲ್‌ಗೆ ವಿಶೇಷವಾದ ಮೆರುಗನ್ನು ನೀಡುತ್ತದೆ.

5. **ವೀಣಾಪಾಣಿ ಶಾರದೆಯ ನಾಡಲ್ಲಿ ಅತಿದೊಡ್ಡ ವೀಣೆ:** ಶೃಂಗೇರಿ ಎಂದರೆ ಶಾರದೆ. ಶಾರದೆ ಎಂದರೆ ಸಂಗೀತ. ಸಂಗೀತವೆಂದರೆ ಲಲಿತಕಲೆ. ಇದೂ ಒಂದು ವಿದ್ಯೆ. ದೇವಿ ಶಾರದೆಯನ್ನು ವೀಣಾಪಾಣಿ ಎಂದೇ ಕರೆಯುತ್ತೇವೆ. ಅಂತಹ ಶಾರದೆಯನ್ನು ಪ್ರತಿದಿನ ಪ್ರತಿಕ್ಷಣ ಭಜಿಸುವ ಜಗದ್ಗುರುಗಳ ಈ ನಿವಾಸದಲ್ಲಿ ತೀರಾ ಸಾಂಕೇತಿಕವಾಗಿ ಪ್ರಪಂಚದ ಅತಿದೊಡ್ಡ ವೀಣೆಯೊಂದನ್ನು ಕಲಾತ್ಮಕವಾಗಿ ಅಳವಡಿಸಲಾಗಿದೆ. ಶೃತಿಬದ್ಧವಾಗಿ ನುಡಿಸಲೂ ಸಾಧ್ಯವಿರುವ ಈ ವೀಣೆಯನ್ನು ಬೆಂಗಳೂರಿನ ಶಿವಾ ಮ್ಯೂಸಿಕಲ್ಸ್‌ನ ನಟರಾಜ್ ನೀಡಿದ್ದಾರೆ.

6. ನೋಡಲು ಅತೀ ಪುರಾತನದ್ದೆಂಬಂತೆ ಕಾಣುವ ಒಂದು ವಿಭಿನ್ನ ಗಡಿಯಾರವನ್ನು ಆಧುನಿಕ ತಂತ್ರಜ್ಞಾನದಲ್ಲಿ ನಿರ್ಮಿಸಿ ಈ ಗುರುಮಂದಿರದಲ್ಲಿ ಅಳವಡಿಸಿದೆ. ಇದನ್ನು ಜರ್ಮನ್‌ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತರೊಬ್ಬರು ನಿರ್ಮಿಸಿ ನೀಡಿದ್ದಾರೆ.

7. ಇಡೀ ಕಟ್ಟಡದ ಒಳಾಂಗಣ ವಿನ್ಯಾಸವನ್ನು ಆ ವಿಭಾಗದಲ್ಲಿ ಪಷ್ಯಾದಲ್ಲೇ ಖ್ಯಾತಿವೆತ್ತ ವಿನೂನಾಯಕ್ ನಿರ್ವಹಿಸಿದ್ದಾರೆ.

ಪರಿಸರದ ಕಥೆ

ದಟ್ಟಕಾನನ-ಶಾಂತಿಯುತ ವಾತಾವರಣಕ್ಕೆ ಹೆಸರಾದ ನರಸಿಂಹವನದಂತಹ ಜಾಗದಲ್ಲಿ ಇಂತಹ ಬೃಹತ್ ಕಟ್ಟಡ ನಿರ್ಮಿಸುವಾಗ, ಯಾವುದೇ ಮರಗಳಿಗೆ, ಪರಿಸರಕ್ಕೆ ಹಾನಿಮಾಡದೇ ಈ ಗುರುನಿವಾಸವನ್ನು ನಿರ್ಮಿಸಿದ್ದೇವೆ. ಇರುವ ಕೆಲವು ತೆಂಗಿನಮರ ಗಳನ್ನು ಹಾಗೆಯೇ ಕಲಾತ್ಮಕವಾಗಿ ಉಳಿಸಿಕೊಂಡಿದ್ದೇವೆ ಮತ್ತು ಇರುವ ಪರಿಸರವನ್ನು ಹಾಗೇ ಉಳಿಸಿಕೊಂಡು ಅದಕ್ಕೆ ಕಲಾತ್ಮಕ ಮೆರುಗು ನೀಡಲು ಕೊಳ ಇತ್ಯಾದಿಗಳನ್ನು ವಿನ್ಯಾಸ ಮಾಡಲಾಗಿದೆ.

ನಮ್ಮ ಭೋಜನ ಶಾಲೆ, ಪಾಠಶಾಲೆ, ಅದ್ಯೆತ ರಿಸರ್ಚ್ ಸೆಂಟರ್‌ಗಳ ನಿರ್ಮಾಣ ಕಾಲದಲ್ಲೂ ನಾವು ಹೇಗೆ ಪರಿಸರ ಮಿತ್ರರಾಗಿದ್ದೆವು ಎಂದು ನಿಮಗೆ ತಿಳಿದೇ ಇದೆ. ನಾನು ಪರಿಸರ ಎನ್ನುವ ಈ ಪದವನ್ನು ಅತ್ಯಂತ ವಿಶಾಲವಾದ ದೃಷ್ಟಿಕೋನದಿಂದ ಮತ್ತೊಂದು ಮಗ್ಗುಲಿನಿಂದ ಕೂಡಾ ಬಳಸುತ್ತಿದ್ದೇನೆ.

ನಿಸರ್ಗದತ್ತ ಪರಿಸರ ಮಾತ್ರವಲ್ಲದೇ ಪರಂಪರೆಯ ಪರಿಸರ ವನ್ನೂ ನಾವು ಕಾಯುತ್ತಿದ್ದೇವೆ. ಶೃಂಗೇರಿಯ ಮಠ ಮೊದಲಿನಿಂದಲೂ ಕಟ್ಟುನಿಟ್ಟಿನ ಸಂಪ್ರದಾಯಕ್ಕೆ ಹೆಸರುವಾಸಿ. ಅಂತಹ ಸಂಪ್ರದಾಯ, ಸನಾತನ ಪರಂಪರೆಯ ಸೊಗಡು ಈ ಹೈಟೆಕ್ ಯುಗದಲ್ಲೂ ಹಾಗೇ ಉಳಿದು ಬಂದಿದೆ. ಇದೇ ಗ್ರೇಟ್‌ನೆಸ್ ಆಫ್ ಶೃಂಗೇರಿ!

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲೊಂದು ಮಾತು ಹೇಳಿಬಿಡ್ತೇನೆ. ಅದು ಗುರುನಿವಾಸದ ಕುರಿತಾಗಿ. ಅಲ್ಲಿ ಸಂಪೂರ್ಣ ಆಯ್ಕೆಯನ್ನು ನಮ್ಮ ಗುರುಗಳೆ ನಿರ್ವಹಿಸಿದ್ದಾರೆ. ಅವರು ದಿನದ ಹೆಚ್ಚಿನಭಾಗ ಕಳೆವ ಧ್ಯಾನಮಂದಿರ, ಲೈಬ್ರರಿ ಮುಂತಾದ ಖಾಸಗಿ ಸ್ಥಳಗಳನ್ನು ಪ್ರತಿಕ್ಷಣವೂ ಅವರಿಂದ ಸಲಹೆ ಪಡೆದು ಪರಂಪರೆಯ ಸೊಗಡಿನೊಂದಿಗೇ ನಿರ್ಮಿಸಲಾಗಿದೆ.

ಇತಿಹಾಸ ಮತ್ತು ಕಟ್ಟಡ

ಕಟ್ಟಡಗಳು ನಮ್ಮ ಇತಿಹಾಸವನ್ನು, ನಮ್ಮ ಸಂದರ್ಭದ ಸಮಗ್ರ ಬದುಕನ್ನು ದಾಖಿಲಿಸುವ ಮಹತ್ವವನ್ನು ಹೊಂದಿದೆ. ಮೈಸೂರು ಅರಮನೆ, ತಾಜ್‌ಮಹಲ್, ಕುತುಬ್‌ಮಿನಾರ್, ಪಂಪೆಯ ದೇಗುಲಗಳೆಲ್ಲಾ ಇತಿಹಾಸ ಮತ್ತು ವರ್ತಮಾನದ ಕೊಂಡಿಯೇ ಅಲ್ಲವೇ. ಹಾಗೆ ಒಂದು ಸಂಸ್ಥಾನ ಬೆಳೆದು ಬಂದ ದಾರಿಯನ್ನು ಅಲ್ಲಿನ ಕಟ್ಟಡಗಳು ಹೇಳಬಲ್ಲವು. ಶೃಂಗೇರಿ ಮಠದಲ್ಲಿ ವಿದ್ಯಾಶಂಕರ ದೇಗುಲವೂ ಸೇರಿದಂತೆ ಇರುವ ನೂರಾರು ಕಟ್ಟಡ, ದೇಗುಲಗಳು ನಮ್ಮ ಮಠ, ಪೀಠ ಪರಂಪರೆಯ ಸಮಗ್ರ ಇತಿಹಾಸದ ದ್ಯೋತಕ. ಹಾಗೇ ಇತಿಹಾಸದ ಜೊತೆ ಇಟ್ಟು ನೋಡಬಹುದಾದ ಐತಿಹಾಸಿಕ ಕಟ್ಟಡ ಈ ನಮ್ಮ ಗುರುಮಂದಿರ ಆಗಬೇಕು. ಶೃಂಗೇರಿಗೆ ಇತ್ತೀಚಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri



ಬರುವ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಿದೆ. ಜಾತಿ, ಮತ, ದೇಶ, ಭಾಷೆಗಳ ಬೇಧವಿಲ್ಲದೆ ನಮ್ಮ ಶೃಂಗೇರಿಗೆ ಜನ ಬರುತ್ತಿದ್ದಾರೆ. ನಮ್ಮ ಶೃಂಗೇರಿಯನ್ನು ಮೆಚ್ಚುತ್ತಿದ್ದಾರೆ. ಇಂತಹ ಯಾತ್ರಾರ್ಥಿಗಳ ವಿಶೇಷ ಆಕರ್ಷಣೆಯಾಗಬೇಕು ಗುರುಮಂದಿರ.

ಈ ಗುರುಮಂದಿರದ ಕನಸು ನನಸಾಗುವ ಅಮೃತ ಘಳಿಗೆಯಲ್ಲಿ ಇದಕ್ಕಾಗಿ ಹೆಗಲು ಕೊಟ್ಟ ಶ್ರೀಮಠದ ಪ್ರಮುಖ ಶಿಷ್ಯವೃಂದಕ್ಕೆ ನಾವು ಕೃತಜ್ಞತೆ ಸಲ್ಲಿಸಲೇಬೇಕು. ಮತ್ತೆ ನಮ್ಮ ಕೆಲಸಗಳನ್ನು ಮೆಚ್ಚಿ ಮಾತಾಡುವ ಜನರನ್ನು ನೆನೆಯಬೇಕು. ಇವರೇ ನಮ್ಮ ಕೆಲಸಗಳ ಸದಾ ಸ್ಫೂರ್ತಿ. ಇನ್ನು ಟೀಕೆಗಳು ಇದ್ದೇ ಇರುತ್ತವೆ. ಈಜುಕೊಳದಲ್ಲಿ ಈಜುಬಲ್ಲವ ನೊಬ್ಬ ಈಜಿನ ಬಗ್ಗೆ ಹೇಳದರೆ ಕೇಳಬೇಕಾಗುತ್ತದೆ. ವರಾಂಡದಲ್ಲಿ ಈಜುತ್ತೇನೆ ಅನ್ನುವವನು ಈಜಿನ ಬಗ್ಗೆ ಏನು ಹೇಳಿಯಾನು.. ಮತ್ತೆ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಹತ್ತು ಜನರಿಂದ ಹತ್ತು ಮಾತು ಕೇಳಲು ಸದಾ ಸಿದ್ಧನಿರಬೇಕು. ವಿಷಯ ಅದಲ್ಲ. ಕನಸು ನನಸಾಗುವ ಆ ಹೊತ್ತು ಅಲ್ಲಿ ನೀವಿರುತ್ತೀರಿ. ಅಷ್ಟು ಸಾಕು..

ಇದೀಗ ತಾನೇ ಸಂಪೂರ್ಣ ಸಜ್ಜುಗೊಂಡು ನಿಂತಿರುವ ಗುರುಭವನವನ್ನು ನೋಡಿಬಂದೆ. ಭರದಿಂದ ನಡೆಯುತ್ತಿರುವ ಅಂತಿಮ

Sri Vidyabharathi Book Centre, Sringeri

CC-O. In Public Domain. Digitized by eGangotri



ಹಂತದ ಕೆಲಸ. ಇನ್ನೆರಡೇ ದಿನ.. ಇಂಥ'ದ್ದೊಂದು ವೈಭವದ ಸಭಾಗೃಹದಲ್ಲಿ ನಮ್ಮ ಜಗದ್ಗುರುಗಳು ವೈಭವಪೂರ್ಣವಾಗಿ ವಿರಾಜಿಸುತ್ತಾರೆ. ಭಕ್ತಜನರ ಭಾವುಕ ಹೃದಯ ತುಂಬಿಬರುತ್ತದೆ. ಈಗಲೂ ಇಂಥದ್ದೊಂದು ಅದ್ಭುತವನ್ನು ಹೇಗೆ ಸಾಧಿಸಲಾಯ್ತು ಎಂದೋ ಅಥವಾ ನಿಮ್ಮ ಯಶಸ್ಸಿನ ಗುಟ್ಟು ಏನು ಎಂದೋ ಆತ್ಮೀಯರು ನನ್ನಲ್ಲಿ ಪ್ರಶ್ನಿಸುವುದುಂಟು. ಇಂತಹ ಪ್ರಶ್ನೆ ಗಳಿಗೆ ಉತ್ತರ ಹೇಳುವಾಗ ಮತ್ತೆ ತಡಬಡಿಸಬೇಕಾದ ಅಗತ್ಯ ನನಗೆ ಎಂದೂ ಬೀಳುವುದಿಲ್ಲ. ಏಕೆಂದರೆ ಯಶಸ್ಸನ್ನು ನಿರ್ಧರಿಸುವ ಏಕೈಕ ಶಕ್ತಿ ನಮ್ಮ ಗುರುಗಳು ಮಾತ್ರ ಎನ್ನುವ ಸ್ಪಷ್ಟವಾದ ನಂಬಿಕೆಯವನು ನಾನು. ಮತ್ತೆ ನಮ್ಮ ಪರಮಪೂಜ್ಯರ ಜೊತೆ ನನಗಿರುವ ಅತ್ಯಂತ ನಿಕಟವಾದ, ಆತ್ಮೀಯವಾದ ಸಂಬಂಧವೇ ಈ ಎಲ್ಲಾ ಯಶಸ್ಸುಗಳ ಮೂಲಮಂತ್ರ. ಗುರುವಿನ ಅಪ್ಪಣೆಯಿಲ್ಲದೇ ಇಲ್ಲಿ ಒಂದು ಸಣ್ಣ ಹುಲ್ಲಿನಕಡ್ಡಿ ಕೂಡಾ ಅಲ್ಲಾಡುವುದಿಲ್ಲ. ಗುರುಗಳು ಪ್ರತಿಯೊಂದನ್ನು ಅಳೆದು, ತೂಗಿ ಮನಸ್ಸಿಗೆ ಬಂದ ಸಂಕಲ್ಪಗಳನ್ನು ಸಾಧನೆಯನ್ನಾಗಿ ರೂಪಿಸಬಲ್ಲರು. ಹಾಗಾಗಿ ನಾನು ನಡೆಯುತ್ತಿರುವುದು ನಮ್ಮ ಗುರುಗಳು ತೋರಿಬಿಟ್ಟ ಬೆಳಕಿನ ದಾರಿಯೊಳಗೆ..

ಇಂಥ ದೊಡ್ಡ ಕೆಲಸಗಳಿಗೆ ನಾಯಕನಾಗು ಎಂದು ನನ್ನನ್ನು ತೊಡಗಿಸಿದ್ದಾರೆ. ಈ ಪಂದ್ಯ ಮುಗಿದು ಗೆದ್ದ ಹುರುಪಿನಲ್ಲಿರುವಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈದಾನಕ್ಕೆ ಅಟ್ಟಿದವರನ್ನು ನೆನೆಯುವುದು ಗೆಲುವಿನಲ್ಲೂ ವಿನಮ್ರನಾಗಿರುವುದು ನನಗೆ ಗುರುಗಳೇ ಕಲಿಸಿದ ಪಾಠ ಒಂದಿಡೀ ಕನಸಿನ ಈ ಮುನ್ನುಡಿಯನ್ನು ನುಡಿಮಾಲಿಕೆಯಾಗಿ, ಗುರುಭವನದ ಜೊತೆ ಜೊತೆಗೆ ಈ ಕಿರುಪುಸ್ತಕವನ್ನೂ ನಮ್ಮ ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಯವರ ಪಾದಕಮಲಗಳಿಗೆ ಅರ್ಪಿಸುತ್ತೇನೆ. ಗುರುಗಳ ಅನುಗ್ರಹ ಲೋಕ ಕಾಯಲಿ..

ಒಂದು ಭಾವಪೂರ್ಣ ಹಾರೈಕೆಯೊಂದಿಗೆ ಗೌರೀಶಂಕರ್ ಮಾತು ಮುಗಿಸುತ್ತಾರೆ.

ನೋಡಿದ್ರಾ ಓದುಗರೇ.. ಹ್ಯಾಗೆ ಆರಂಭಿಸೋದು ಅನ್ನುವ ಆರಂಭದ ಗೊಂದಲವೊಂದು ವಿಷಯದ ಅಂತಿಮಘಟ್ಟಕ್ಕೆ ಬಂದಾಗ ಈಗ ನಿಮಗೇನು ಅನ್ನಿಸುತ್ತದೆ? ಒಂದು ಯಶಸ್ಸಿನ ಕಥೆಯನ್ನು ಅದರ ಒಳಮೂಲೆಗಳಲ್ಲಿ ಹುಡುಕಿ ಕೆದಕಿ ಬರೆವವರ ಸಂಖ್ಯೆ ನಮ್ಮಲ್ಲಿ ಕಡಿಮೆ. ನಿರೂಪಕನಾದ ನಾನು ನನ್ನ ಬರವಣಿಗೆ, ಸಭಾ ಕಾರ್ಯಕ್ರಮ ಸೀರಿಯಲ್, ನಾಟಕ, ಬೀದಿನಾಟಕ ಇತ್ಯಾದಿ ಕಾರ್ಯಕ್ರಮಗಳಲ್ಲಿ ಒಂದು ಬದ್ಧತೆಯನ್ನು ನನ್ನ ಮಟ್ಟಿಗೆ ರೂಪಿಸಿಕೊಂಡಿದ್ದೇನೆ. ನಮ್ಮ ಕಣ್ಣೆದುರೇ ಇರುವ ಅದೆಷ್ಟೋ ವಿಷಯಗಳು ನಮಗೇ ತಿಳಿದಿರುವುದಿಲ್ಲ. ಅಂಥವನ್ನು ಜನರು ಓದಿಸಿಕೊಂಡೋ, ನೋಡಿಕೊಂಡೋ ಹೋಗುವ ಶೈಲಿಯೊಂದರಲ್ಲಿ ರೂಪಿಸಿ ಆ ಕುರಿತು ಬೆಳಕು ಚೆಲ್ಲಬೇಕು ಎಂಬುದು ಸಮರ್ಥ ಸಾರಥಿ ಪುಸ್ತಕಕ್ಕೆ ದೊರೆತ ಅಪ್ರತಿಮ ಜನಬೆಂಬಲ, ಪ್ರತಿಕ್ರಿಯೆಗಳು ನನ್ನ ಬದ್ಧತೆಗೆ ಯೋಗ್ಯತೆ ಇದೆ ಎಂಬುದನ್ನು ತೋರಿಸಿಕೊಟ್ಟಿದೆ. ಓದುಗ ಮಹಾಪ್ರಭುಗಳಿಗೆ ಅಂಥದ್ದೇ ಇನ್ನೊಂದು ಪುಸ್ತಕ ನೀಡುತ್ತಾ, ಶುಭ ಹಾರೈಕೆ ಕೋರಿಬಿಡ್ತೇನೆ.

-ರಮೇಶ್ ಬೇಗಾರ್

Sri Vidyabharathi Book Centre, Sringeri

CC-O. In Public Domain. Digitized by eGangotri

ನರಸಿಂಹವನ

ಟಿ.ವಿ. ಶಿವಕುಮಾರ್

ಶೃಂಗೇರಿಗೆ ಬರುವ ಯಾತ್ರಾರ್ಥಿಗಳೆಲ್ಲರೂ ನೋಡಲೇಬೇಕಾದ ಒಂದು ಸ್ಥಳ ನರಸಿಂಹವನ. ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಅಧಿಪತಿಗಳು ವಾಸವಾಗಿರುವ ಈ ಪರಮ ಪವಿತ್ರವಾದ ಸ್ಥಳದ ದರ್ಶನ ಮಾತ್ರದಿಂದಲೇ ಹೃದಯದಲ್ಲಿ ಒಂದು ಅನಿರ್ವಚನೀಯವಾದ ಅನುಭೂತಿ ಉಂಟಾಗುತ್ತದೆ. ಈ ಸ್ಥಳಕ್ಕೆ ಮೊಟ್ಟಮೊದಲು ತಪಸ್ಸನ್ನಾಚರಿಸಲು ಆಗಮಿಸಿದವರು ಶೃಂಗೇರಿ ದಕ್ಷಿಣಾಮ್ನಾಯ ಪೀಠದ 33 ನೇ ಅಧಿಪತಿಗಳಾದ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀಮಹಾಸ್ವಾಮಿಗಳವರು. ಅದಕ್ಕೂ ಮೊದಲು ಪೀಠಾಧಿಪತಿಗಳು ತುಂಗಾನದಿಯ ಉತ್ತರ ಭಾಗದಲ್ಲಿರುವ ಶ್ರೀಮಠದಲ್ಲಿ (ಚಂದ್ರಮೌಳೀಶ್ವರ ತೊಟ್ಟಿ) ವಾಸಿಸುತ್ತಿದ್ದರು. ಜಗದ್ಗುರುಗಳವರು ಪಾಠ-ಪ್ರವಚನ, ಶ್ರೀ ಶಾರದಾ ಚಂದ್ರಮೌಳೀಶ್ವರರ ಪೂಜೆ ಇತ್ಯಾದಿಗಳನ್ನು ಅಲ್ಲಿಯೇ ನಡೆಸುತ್ತಿದ್ದರಿಂದ ಅದಕ್ಕೆ ಚಂದ್ರಮೌಳೀಶ್ವರ ತೊಟ್ಟಿ ಎಂದು ಹೆಸರಾ ಯಿತು. (ಹಾಲಿ ಆಡಳಿತಾಧಿಕಾರಿಗಳ ಛೇಂಬರ್ ಇರುವ ಕಟ್ಟಡ)

ಆದರೆ ಶ್ರೀ ಸಚ್ಚಿದಾನಂದ ಶಿವಾಭಿನವ ನರಸಿಂಹ ಭಾರತೀ ಮಹಾಸ್ವಾಮಿಗಳವರಿಗೆ ಜನಸಮೂಹದಿಂದ ದೂರವಿದ್ದು ಏಕಾಂತದಲ್ಲಿ ಪೂಜೆ, ಧ್ಯಾನ ಇತ್ಯಾದಿಗಳನ್ನು ಮಾಡುತ್ತಾ ಆತ್ಮಾನಂದವನ್ನು ಅನುಭವಿಸಬೇಕೆಂಬ ಇಚ್ಛೆ ಇದ್ದುದರಿಂದ ಅವರು ನರಸಿಂಹವನಕ್ಕೆ ಆಗಮಿಸಿದರು. ಅವರ ಈ ನರಸಿಂಹವನದಲ್ಲಿ ವಾಸ ಮಾಡಬೇಕೆಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಚ್ಛೆ ಮತ್ತು ನರಸಿಂಹ ವನಕ್ಕೆ ಆಗಮನ ಇತ್ಯಾದಿಗಳನ್ನು ಶ್ರೀಗಳವರ ಜೀವನಚರಿತ್ರೆಯನ್ನು ಬರೆದ ಅವರ ಆತ್ಮೀಯ ಶಿಷ್ಯರೂ, ಆಗಿನ ಶ್ರೀಮಠದ ಆಡಳಿತಾಧಿಕಾರಿಗಳೂ ಆಗಿದ್ದ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳವರು ಹೀಗೆ ಬರೆಯುತ್ತಾರೆ. "1894 ರಿಂದ ಮೂರು ವರ್ಷಗಳ ಕಾಲ ಸರ್ವದಾ ಭಾಷ್ಯಾದಿ ಗ್ರಂಥಪ್ರವಚನದಲ್ಲಿ ಆಸಕ್ತರಾಗಿದ್ದ ಶ್ರೀ ಶ್ರೀಗಳವರಿಗೆ ಏಕಾಂತವಾಸದಲ್ಲಿ ಅಭಿರುಚಿ ಹೆಚ್ಚುತ್ತಾ ಬಂದಿತು. ಇದಕ್ಕಾಗಿ ಶ್ರೀಮಠಕ್ಕೆ ದಕ್ಷಿಣ ದಿಕ್ಕಿನಲ್ಲಿ ತುಂಗಾನದಿಯಿಂದ ಆಚೆ ಅರಣ್ಯವಾಗಿದ್ದು ವ್ಯಾಘ್ರಾದಿ ದುಷ್ಟಮೃಗಗಳ ವಾಸಕ್ಕೆ ಅನುಕೂಲವಾಗಿಯೂ, ಗ್ರಾಮದ ಪಶ್ವಾದಿಗಳಿಗೆ ಹಿಂಸಾಕರವಾಗಿಯೂ ಇದ್ದ ಪ್ರದೇಶವನ್ನು ಪರಿಷ್ಕರಿಸಿ ತಪೋವನವನ್ನಾಗಿ ಮಾಡಲು ಪ್ರಾರಂಭಿಸಲಾಯಿತು. ಇದಕ್ಕೆ ನರಸಿಂಹವನವೆಂದು ಶ್ರೀಗಳವರು ತಮ್ಮ ಗುರುಗಳಾದ ಶ್ರೀ ನರಸಿಂಹಭಾರತೀ ಸ್ವಾಮಿಗಳವರ ಜ್ಞಾಪಕವಾದ ನಾಮಧೇಯವನ್ನು ಕೊಟ್ಟರು. ಅಮವರೆಗೆ ಆ ಪ್ರದೇಶವು ಪೂರ್ಣವಾಗಿ ಪರಿಷ್ಕರಿಸಲ್ಪಟ್ಟಿರಲಿಲ್ಲ ಮತ್ತು ಅಲ್ಲಿ ವಾಸಯೋಗ್ಯವಾದ ಕಟ್ಟಡಗಳನ್ನೂ ಕಟ್ಟಿರಲಿಲ್ಲ. ಹೇವಿಳಂಬಿ ಸಂವತ್ಸರದ (1897) ಆಶ್ವಯುಜ ಬಹುಳ ಪಂಚಮಿಯ ಪ್ರಾತಃಕಾಲದಲ್ಲಿ ಶ್ರೀ ಶಾರದಾಂಬೆಯ ಉತ್ಸವ ಮೂರ್ತಿಯೊಡನೆ ಶ್ರೀಗಳವರು ನರಸಿಂಹವನಕ್ಕೆ ದಯಮಾಡಿಸಿದರು. ಆ ದಿನ ಮಧ್ಯಾಹ್ನ ಅಮ್ಮನವರ ಮತ್ತು ಶ್ರೀ ಚಂದ್ರಮೌಳೀಶ್ವರ ದೇವರುಗಳ ಪೂಜೆಯು, ತತ್ಕಾಲೋಪ ಯುಕ್ತವಾಗುವಂತೆ ನಿರ್ಮಿತವಾಗಿದ್ದ ಚಪ್ಪರಗಳಲ್ಲಿ ನಡೆದು ಮಿತವಾಗಿ ಬ್ರಾಹ್ಮಣ ಭೋಜನವು ನಡೆಯಿತು. ಸಾಯಂಕಾಲ ಐದು ಗಂಟೆಗೆ ಶ್ರೀ ಶಾರದಾಂಬೆಯವರನ್ನು ಉತ್ತರ ತೀರದಲ್ಲಿರುವ ದೇವಸ್ಥಾನಕ್ಕೆ ತೆರಳಿಸಬಹು ದೆಂದು ಅಪ್ಪಣೆಮಾಡಿ, ಚಂದ್ರಮೌಳೀಶ್ವರ ದೇವರೊಡನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಗಳವರು ಆ ರಾತ್ರಿ ಮಿತಪರಿಜನಯುಕ್ತರಾಗಿ ಅಲ್ಲಿಯೇ ವಸತಿ ಮಾಡಿದರು. ಅದುವರೆಗೂ ಶ್ರೀಗಳವರ ಅಭಿಪ್ರಾಯವು ವ್ಯಕ್ತ ಪಟ್ಟಿರಲಿಲ್ಲ. ಮಾರನೆಯ ದಿನ ಪ್ರಾತಃಕಾಲ, ತಮಗೆ ಕೆಲವು ಕಾಲ ವಿವಿಕ್ತವಾಗಿ ವಾಸಮಾಡಬೇಕೆಂಬ ಅಭಿಪ್ರಾಯವಿರುವುದ ರಿಂದ, ಅದಕ್ಕೆ ಅತ್ಯಾವಶ್ಯಕವಾದ ಪರ್ಣ ಶಾಲೆಗಳನ್ನು ಕಲ್ಪಿಸುವಂತೆ ಮಠದ ಅಧಿಕಾರಿ ಗಳಿಗೆ ಅಪ್ಪಣೆ ಮಾಡಿದರು. ಅಂದಿನಿಂದ ಸಂಸ್ಥಾನ ಸಂಬಂಧವಾದ ರಾಜಚಿಹ್ನೆಗಳೆಲ್ಲವೂ ಒಂದೊಂದಾಗಿ ಶ್ರೀಗಳವರಿಂದ ದೂರ ಮಾಡಲ್ಪಡುತ್ತಾ ಬಂದವು. ಗುರುಪರಂಪರೆ ಯಿಂದ ಪೂಜಿತರಾಗಿ ಬಂದಿರುವ ಚಂದ್ರ ಮೌಳೀಶ್ವರ ದೇವರಿಗೆ ಪೂಜೋಪಕರಣವಾಗಿ ಮಹಾರಾಜರುಗಳಿಂದಲೂ ಶಿಷ್ಯಕೋಟಿ ಗಳಿಂದಲೂ ಕೊಡಲ್ಪಟ್ಟಿದ್ದ ರಜತ ಸುವರ್ಣಾದಿ ಪಾತ್ರ ಸಮೂಹವನ್ನೂ, ಪ್ರಯತ್ನಸಾಧ್ಯವಾದ ಕ್ಷೀರಾದಿಪೂಜಾಸಾಮಗ್ರಿಗಳನ್ನೂ ಬಿಟ್ಟು, ಕೇವಲ ಸಾತ್ವಿಕ ಭಾವದಿಂದ ಕಾಲತ್ರಯದಲ್ಲಿಯೂ ತುಂಗಾತೀರ್ಥದಿಂದ ಯಥೇಚ್ಛವಾಗಿ ಅಭಿಷೇಕ ವನ್ನು ಮಾಡಿ, ವನಜಾತವಾದ ಪತ್ರ, ಪುಷ್ಪಗಳಿಂದ ಪೂಜಿಸಿ, ಅನೇಕವಾದ ಶಿವಸ್ತುತಿಗಳಿಂದಲೂ, ಶಿವನಾಮ ಸಂಕೀರ್ತನೆ ಗಳಿಂದಲೂ ಭಜನೆಯನ್ನು

ಮಾಡಲು ಪ್ರಾರಂಭಿಸಿದರು. ತಮ್ಮ ಆಹಾರದಲ್ಲಿ ಕಟ್ಟಾವ್ಲ ಲವಣಾದಿ ಪದಾರ್ಥಗಳನ್ನು ವರ್ಜಿಸಿದರು. ಮಧ್ಯಾಹ್ನ ನಾಲ್ಕು ಗಂಟೆಗಳ ಮೇಲೆ ತಮ್ಮ ಪರಿಜನರಲ್ಲಿ ಯಾರಾದ ರೊಬ್ಬರನ್ನು ಮುಂದಿರಿಸಿಕೊಂಡು ನರಸಿಂಹ ವನಕ್ಕೆ ಸಮೀಪವಾದ ಅರಣ್ಯದಲ್ಲಿ ಸಂಚರಿಸು ತ್ತಲೂ, ಪ್ರಶಸ್ತವಾಗಿ ತೋರಿದಕಡೆ ವೃಕ್ಷ ಮೂಲದಲ್ಲಿ ಕುಳಿತು ನಿರ್ಗುಣಧ್ಯಾನ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಂದ ಆತ್ಮಾನಂದವನ್ನು ಅನುಭವಿಸುತ್ತಲೂ ಇದ್ದು, ಸಾಯಂಕಾಲ ಆರು ಗಂಟೆಗೆ ತಮ್ಮ ಪರ್ಣಶಾಲೆಗೆ ತಿರುಗಿ ಬರುತ್ತಿದ್ದರು. ಈ ರೀತಿಯಾಗಿ ಜನಸಮೂಹದಿಂದ ದೂರವಾಗಲು ಪ್ರಯತ್ನ ಮಾಡುತ್ತಲಿದ್ದರೂ, ಪ್ರಾತಃಕಾಲ ಪೂಜಾನಂತರ ಹನ್ನೊಂದು ಗಂಟೆಗಳವರೆಗೆ ಶಿಷ್ಯರಿಗೆ ಭಾಷ್ಯಪಾಠವನ್ನು ಹೇಳುವುದರಲ್ಲಿ ಔದಾಸೀನ್ಯವನ್ನು ವಹಿಸಿರಲಿಲ್ಲ."

ಶ್ರೀಗಳವರು 1912 ರಲ್ಲಿ ಬ್ರಹ್ಮೈಕ್ಯರಾದ ನಂತರ ಅವರ ಶರೀರವನ್ನು ಅಲ್ಲೇ ಸಮಾಧಿ ಮಾಡಲಾಯಿತು. ಅದಕ್ಕೂ ಮೊದಲು ಶ್ರೀಗಳವರ ವಾಸಕ್ಕಾಗಿ ಒಂದು ಭವನವನ್ನು ಕಟ್ಟಿಸಿ ಅದಕ್ಕೆ "ಸಚ್ಚಿದಾನಂದ ವಿಲಾಸ" ಎಂದು ಹೆಸರಿಡಲಾಯಿತು. ನಂತರ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳವರು ತಮ್ಮ ಗುರುಗಳ ಅಧಿಷ್ಠಾನದ ಮೇಲೆ ಭವ್ಯವಾದ ಮಂದಿರವನ್ನು ಕಟ್ಟಿಸಿ, ಅಮೃತ ಶಿಲೆಯ ವಿಗ್ರಹವನ್ನು ಸ್ಥಾಪಿಸಿ 1916 ರಲ್ಲಿ ಕುಂಭಾಭಿಷೇಕವನ್ನು ನೆರವೇರಿಸಿದರು. ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರೂ ಸಹ ನರಸಿಂಹವನದಲ್ಲೇ ವಾಸವಾಗಿದ್ದು ಚಂದ್ರಮೌಳೀಶ್ವರ ಪೂಜೆ ಇತ್ಯಾದಿಗಳನ್ನು ನೆರವೇರಿಸುತ್ತಿದ್ದರು. ಶ್ರೀ ಶ್ರೀಗಳವರು 1954 ರಲ್ಲಿ ಬ್ರಹ್ಮೈಕ್ಯರಾದ ಅವರ ಪಾರ್ಥಿವ ಶರೀರವನ್ನು ತಮ್ಮ ಗುರುಗಳ ಅಧಿಷ್ಠಾನದ ಪಕ್ಕದಲ್ಲೇ ಸಮಾಧಿ ಮಾಡಲಾಯಿತು. ಮುಂದಿನ ಪೀಠಾಧಿಪತಿಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಮಹಾ ಸ್ವಾಮಿಗಳವರೂ ಸಹ ಅಲ್ಲೇ ವಾಸವಾಗಿದ್ದರು. ಶ್ರೀಗಳವರು ಧ್ಯಾನವನ್ನಾಚರಿಸಲು ಶ್ರೀ ಕಾಲ ಭೈರವನ ದೇವಸ್ಥಾನಕ್ಕೆ ತೆರಳುತ್ತಿದ್ದರು. ಸಂಜೆ ಸ್ವಲ್ಪಕಾಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಣ್ಯದಲ್ಲೇ ಸಂಚರಿಸುತ್ತಿದ್ದರು. ನರಸಿಂಹವನದಲ್ಲಿ ವ್ಯರ್ಥವಾಗಿರುವ ಜಾಗವನ್ನು ಉಪಯೋಗಪಡಿಸಬೇಕೆಂಬ ದೃಷ್ಟಿಯಿಂದ ತೆಂಗು, ಅಡಿಕೆ, ಮಾವು, ಹಲಸು, ನೇರಳೆ ಇತ್ಯಾದಿ ಅನೇಕ ವಿಧವಾದ ಮರಗಳನ್ನು ನೆಟ್ಟಿಸಿದರು. ಶ್ರೀಗಳವರ ಪ್ರಾಣಿದಯೆ ಅಸಾಧಾರಣವಾದುದು. ಗೋಸಂರಕ್ಷಣೆಗಾಗಿ ಒಂದು ಗೋಶಾಲೆ ಮತ್ತು ಗಜ ಶಾಲೆಯನ್ನು ಕಟ್ಟಿಸಿದರು. ಶ್ರೀಗಳವರು ಸಹ ತಮ್ಮ ಗುರುಗಳ ಅಧಿಷ್ಠಾನದ ಮೇಲೆ ಮಂದಿರವನ್ನು, ಅಮೃತ ಶಿಲಾ ವಿಗ್ರಹವನ್ನು ಸ್ಥಾಪಿಸಿ ಕುಂಭಾಭಿಷೇಕವನ್ನು ನೆರವೇರಿಸಿದರು. ಶಿಥಿಲವಾಗಿದ್ದ ಕಾಲಭೈರವ ದೇವಾಲಯದ ನವೀಕರಣ ಗೊಳಿಸಿದರು. ಆಗಾಗಲೇ ಶ್ರೀಗಳವರ ದರ್ಶನಾರ್ಥವಾಗಿ ಪ್ರತಿನಿತ್ಯ ನೂರಾರು ಜನ ಭಕ್ತರು ನರಸಿಂಹವನಕ್ಕೆ ಆಗಮಿಸುತ್ತಿದ್ದರು. ಮಳೆಗಾಲದಲ್ಲಿ ತುಂಗಾ ನದಿಯನ್ನು ದೋಣಿಯ ಮೂಲಕ ದಾಟಿ ಬರುವುದು ತುಂಬಾ ಕಷ್ಟವಾಗುತ್ತಿತ್ತು. ಅದಕ್ಕಾಗಿ ನರಸಿಂಹ ವನದಿಂದ ಶ್ರೀಮಠಕ್ಕೆ ಸಂಪರ್ಕ ಕಲ್ಪಿಸುವ ಒಂದು ಸೇತುವೆಯನ್ನು ನಿರ್ಮಿಸಬೇಕೆಂದು ಶ್ರೀಗಳವರು ಸಂಕಲ್ಪಿಸಿ ಕಾರ್ಯವು ಕೈಗೂಡು ವಂತೆ ಮಾಡಿದರು. ಶ್ರೀಗಳವರು 1989 ರಲ್ಲಿ ಬ್ರಹ್ಮೈಕ್ಯರಾದರು.

ಮಠದ ಪರಂಪರೆಯಂತೆ ಶ್ರೀಗಳವರ ಸಮಾಧಿಯನ್ನು ಸಹ ಗುರು, ಪರಮಗುರು ಗಳವರ ಅಧಿಷ್ಠಾನದ ಪಕ್ಕದಲ್ಲೇ ಮಾಡ ಲಾಯಿತು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ತಮ್ಮ ಗುರುಗಳವರ ಅಧಿಷ್ಠಾನದ ಕುಂಭಾಭಿಷೇಕವನ್ನು 1993 ರಲ್ಲಿ ಅತ್ಯಂತ ವಿಜೃಂಬಣೆ ಯಿಂದ ನೆರವೇರಿಸಿದರು. ಇದೇ ಸಂದರ್ಭದಲ್ಲಿ ನರಸಿಂಹವನದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಸ್ರಚಂಡೀಯಾಗ, ಅತಿರುದ್ರಯಾಗ, ಚತುರ್ವೇದ ಹವನ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಅಭೂತಪೂರ್ವವಾಗಿ ನಡೆದವು. ಶ್ರೀಗಳವರು 1996 ರಲ್ಲಿ ಶ್ರೀಮಠದ ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲೆಯ ಶತಮಾನೋ ತ್ಸವದ ಸವಿನೆನಪಿಗಾಗಿ 25 ಲಕ್ಷ ರೂ.ಗಳಿಂದ ಒಂದು ಸ್ಮಾರಕ ಭವನವನ್ನು ನರಸಿಂಹವನದ ಕಾಲಭೈರವ ದೇವಸ್ಥಾನದ ಸಮೀಪದಲ್ಲಿ ನಿರ್ಮಾಣಗೊಳಿಸಿದರು.

ಪಾಠಶಾಲೆಯ ಸಮೀಪದಲ್ಲಿ ಸುಮಾರು ಎಂಭತ್ತು ಲಕ್ಷ ರೂ.ಗಳಿಂದ ಶ್ರೀ ಶಾಂಕರ ಅದ್ವೈತ ಶೋಧ ಕೇಂದ್ರವನ್ನು ಸ್ಥಾಪಿಸಿದರು. ಅಪೂರ್ವವಾದ ಮತ್ತು ಅಪ್ರಕಟಿತವಾದ ಗ್ರಂಥಗಳನ್ನು ಮುದ್ರಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಹಾಗೆಯೇ ಶ್ರೀಮಠದಲ್ಲಿ ಸುಮಾರು ಆರುನೂರು ವರ್ಷಗಳ ಕಾಲದಿಂದ ರಕ್ಷಿಸಿಕೊಂಡು ಬರುತ್ತಿರುವ ತಾಳಪತ್ರಗ್ರಂಥ (ಓಲೆಗರಿ) ಗಳನ್ನು ಮೈಕ್ರೋಫಿಲ್ಮ್ ರೂಪದಲ್ಲಿ ಸಂಗ್ರಹಿಸಿಡುವ ವ್ಯವಸ್ಥೆಯು ನಡೆಯುತ್ತಿದೆ. ಈಗ ಶ್ರೀಮಠದ ಗ್ರಂಥಾಲಯದಲ್ಲಿ ಸುಮಾರು ಇಪ್ಪತ್ತೇಳು ಸಾವಿರ ಗ್ರಂಥಗಳಿವೆ.

ಸುಮಾರು 110 ವರ್ಷಗಳಿಂದ ಶ್ರೀಮಠದಲ್ಲಿ ನಡೆಯುತ್ತಾ ಬಂದಿರುವ "ಶ್ರೀ ಮಹಾಗಣಪತಿ ವಾಕ್ಯಾರ್ಥ ಸಭೆ" ಸಹ ನರಸಿಂಹವನದ ಅಧಿಷ್ಠಾನ ಮಂದಿರದ ಪ್ರಾಂಗಣದಲ್ಲಿ ನಡೆಯುತ್ತಿದೆ. ಈ ಸಂದರ್ಭದಲ್ಲಿ ಶಾಸ್ತ್ರ ವಿದ್ವಾಂಸರನ್ನು ಗೌರವಿಸುವುದಷ್ಟೇ ಅಲ್ಲದೇ, ಶಾಸ್ತ್ರ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸ ಲಾಗುತ್ತಿದೆ.

ಸರಿಸುಮಾರು 50 ಎಕರೆ ವಿಸ್ತೀರ್ಣದಲ್ಲಿ ಹಿಂದೆ ಮೃಗಾದಿ ವಾಸಸ್ಥಳವಾಗಿದ್ದ ಈ ಪ್ರದೇಶ ಈಗ ಸುಂದರ ನರಸಿಂಹವನವಾಗಿ ಕಂಗೊಳಿಸುತ್ತಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಳಗಲಿ ನಮ್ಮ ಈ ಮಠ, ಮೊರೆಯಲಿ ಜಯಕಾರದ ಭೋರ್ಗರೆತ

ಎನ್.ಸಿ. ಪಾಂಡುರಂಗ

ಇದೊಂದು ಸಂಭ್ರಮದ ಕ್ಷಣ. ಶೃಂಗೇರಿಯ ದಕ್ಷಿಣಾಮ್ನಾಯ ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನದ 36 ನೇ ಪೀಠಾಧಿಪತಿಗಳಾದ ಭಾರತೀತೀರ್ಥ ಮಹಾಸ್ವಾಮೀಜಿಯವರು ಸಾರ್ವಜನಿಕ ದರ್ಶನ, ಚಂದ್ರಮೌಳೇಶ್ವರ ಪೂಜೆ ಇತ್ಯಾದಿಗಳಿಗೆ ಬಳಸಲಿರುವ ಐತಿಹಾಸಿಕ ಕಟ್ಟಡ ಗುರುಭವನದ ಉದ್ಘಾಟನಾ ಸಮಾರಂಭ.

ಇಂದು ಜಗತ್ತು ಶೃಂಗೇರಿಯೆಡೆಗೆ ನಿಬ್ಬೆರಗಾಗಿ ನೋಡುತ್ತಿದೆ. ನಿಜ, ಶೃಂಗೇರಿಯ ಈ ಶಾರದಾಪೀಠ ಅಂತಹ ಅದ್ಭುತಗಳನ್ನು ಜಗತ್ತಿಗೆ ನಿಚ್ಚಳವಾಗಿ ಸಾರಿಹೇಳುತ್ತಿದೆ. ಅದೂ ಲವಲೇಶದ ವಿವಾದವೂ ಇಲ್ಲದೆ!

ಶೃಂಗೇರಿಯ ಜಗದ್ಗುರು ಪರಂಪರೆಯಲ್ಲಿಯೇ ಅತ್ಯಂತ ವಿಶಿಷ್ಟವಾದ ಸಾಧಕರಾಗಿ ಶ್ರೀ ಶ್ರೀ ಭಾರತೀತೀರ್ಥರು ಮೂಡಿಬಂದಿದ್ದಾರೆ. ನಿಜ ಈಗ ಶ್ರೀ ಶ್ರೀ ಭಾರತೀತೀರ್ಥರು ಸನಾತನ ಪರಂಪರೆ ಮತ್ತು ಆಧುನಿಕ ಜಗತ್ತಿನ ಸುವರ್ಣ ಸೇತುವೆಯಾಗಿದ್ದಾರೆ. ಆಧುನಿಕ ಶೃಂಗೇರಿಯ ಹರಿಕಾರರು ಅವರೆಂದರೆ ಅದರಲ್ಲಿ ಅತಿಶಯೋಕ್ತಿಯೇ ಇಲ್ಲ. ಇವರ ಕಾಲದಲ್ಲಿ ಇವರು ನಡೆಸುತ್ತಿರುವ ನಾಗಾಲೋಟದ ಸಾಧನೆಗಳ ಸುರಿಮಳೆಯೇ ಇವರ ಕಾರ್ಯಕ್ಷಮತೆಯ ದ್ಯೋತಕವಾಗಿದೆ.

ವಿದ್ಯೆಯ ಅಧಿದೇವತೆ ಮಾತೆ ಶಾರದೆ. ಇಂತಹ ಶಾರದೆಯ ಭಜಕ ಭಾರತೀತೀರ್ಥ ಮಹಾಸ್ವಾಮೀಜಿ. ಹಾಗಾಗಿ ವಿದ್ಯೆಯನ್ನು ಹಣದ ಹಂಗಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿಲುಕಿಸದೆ ಬಡಜನರನ್ನು ತಲುಪುವಂತಹ ವ್ಯವಸ್ಥೆಗಳನ್ನು ಶ್ರೀ ಶ್ರೀಗಳು ರೂಪಿಸಿದ್ದಾರೆ. ಶೃಂಗೇರಿಯ ಹತ್ತಾರು ವಿದ್ಯಾಸಂಸ್ಥೆಗಳಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡಿ ಇತರ ಸಂಸ್ಥೆಗಳೂ ಇದನ್ನೇ ಅನುಕರಿಸುವ ಮಾರ್ಗಪರಂಪರೆಯನ್ನು ಇವರು ಹಾಕಿಕೊಟ್ಟಿದ್ದಾರೆ. ಮುಖ್ಯವಾಗಿ ಚಿಕ್ಕಮಗಳೂರು ಜಿಲ್ಲೆಯ ಜನರಿಗೆ ನೆರವಾಗಬಲ್ಲ ನೂರಾರು ಸಾಮಾಜಿಕ ಸೇವಾ ಕೈಂಕರ್ಯವನ್ನು ಶ್ರೀ ಶ್ರೀಗಳವರು ಕೈಗೊಂಡಿದ್ದಾರೆ. ಇವರ ಪ್ರತಿವರ್ಷದ ವರ್ಧಂತಿಯ ಸುಸಂದರ್ಭದಲ್ಲಿ ಬಡಜನರಿಗೆ ಹೊಲಿಗೆ ಯಂತ್ರ ಮುಂತಾದವುಗಳನ್ನು ನೀಡುತ್ತಿರುವುದೂ ಅಲ್ಲದೇ ಅಂಗವಿಕಲರಿಗಾಗಿ ಸೈಕಲ್, ಶ್ರವಣಯಂತ್ರ ಮುಂತಾದವುಗಳನ್ನು ನೀಡುತ್ತಿದ್ದಾರೆ. ದಾನಧರ್ಮಗಳ ವಿಚಾರದಲ್ಲಿ ಶೃಂಗೇರಿ ಶಾರದಾ ಪೀಠ ತನ್ನ ಸುವರ್ಣಯುಗದಲ್ಲಿದೆ. ದೆಹಲಿಯಲ್ಲಿ ಅಶಕ್ತಶಿಶುಗಳನ್ನು ಪಾಲಿಸುವ ಯೋಜನೆ ಯಶಸ್ಸು ಕಂಡಿದೆ. ಶೃಂಗೇರಿಯಲ್ಲಿ ಹಿಂದೂಗಳ ಪೂಜ್ಯನೀಯವಾದ ಗೋವುಗಳನ್ನು ರಕ್ಷಿಸುವ ಗೋಸಂರಕ್ಷಣಾ ಕೇಂದ್ರ ಆರಂಭವಾಗುವ ಸಕಲ ಸಿದ್ಧತೆಗಳನ್ನು ನಡೆಸಲಾಗಿದೆ.

ಶೃಂಗೇರಿಯ ಶಾರದಾಪೀಠ ಸದಾ ನಮ್ಮ ಪರಂಪರೆಯನ್ನು ಕಾಪಿಡುವ ಪ್ರಯತ್ನದಲ್ಲಿ ಯಶಸ್ಸನ್ನು ಗಳಿಸುತ್ತಿರುವ ಏಕೈಕ ಧಾರ್ಮಿಕ ಸಂಸ್ಥೆ. ಇಂತಹ ಸಂಸ್ಥೆ ನಮ್ಮ ಹಿಂದಿನ ವೈದ್ಯಪದ್ಧತಿಯಲ್ಲಿ ಬಳಕೆಯಾಗುತ್ತಿದ್ದ ಗಿಡಮೂಲಿಕೆಗಳನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡುವ ಬೃಹತ್ ಯೋಜನೆಯೊಂದನ್ನು ರೂಪಿಸಿ ವಿಸ್ತಾರವಾದ ಜಾಗವೊಂದರಲ್ಲಿ ವಿಭಿನ್ನವಾದ ಮೂಲಿಕಾ ವನ ಮೂಡಿಬರಲಿದೆ. ಇದರ ಸಿದ್ಧತೆ ಶೃಂಗೇರಿಯ ಹೊರಭಾಗದ ಮೆಣಸೆಯಲ್ಲಿ ನಡೆದಿದೆ.

ಹೀಗೆ ಪರಂಪರೆಯನ್ನು ಕಾಪಾಡುತ್ತಲೇ ಆಧುನಿಕ ಬದುಕಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಶ್ಯಕತೆಗಳನ್ನು ಗಮನಿಸುವಲ್ಲಿ ಕೂಡಾ ಈ ಪೀಠ ಹಿಂದೆ ಬಿದ್ದಿಲ್ಲ. ಈಗಾಗಲೇ ಕಂಪ್ಯೂಟರ್ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಿಕೊಂಡ ಶ್ರೀಮಠ ಅದರ ಕಛೇರಿ ಮತ್ತಿತರ ನಿರ್ವಹಣೆಯನ್ನು ಬೃಹತ್ ನೆಟ್‌ವರ್ಕ್‌ನ ಮೂಲಕ ನಿರ್ವಹಿಸುತ್ತಿದೆ. ಅಲ್ಲದೇ ಈ ವರ್ಷ ತಲಾ ಒಂದು ಲಕ್ಷ ರೂ. ಬೆಲೆಬಾಳುವ 75 ಕಂಪ್ಯೂಟರ್ ಕಿಟ್‌ಗಳನ್ನು ಜಿಲ್ಲೆಯ ಕಂಪ್ಯೂಟರ್ ಹೊಂದಿರುವ ಎಲ್ಲಾ ಹೈಸ್ಕೂಲ್‌ಗಳಿಗೆ ಉಚಿತವಾಗಿ ಒದಗಿಸಲಾಗಿದೆ.

ಅಲ್ಲದೇ ಪುರಾತನ ಕಾಲದಲ್ಲಿ ಬಳಕೆಯಲ್ಲಿದ್ದ ಅದೆಷ್ಟೋ ತಾಳೆಗರಿಯ ಗ್ರಂಥಗಳು ಶ್ರೀಮಠದ ಸಂಗ್ರಹದಲ್ಲಿದೆ. ಈ ಗ್ರಂಥಗಳನ್ನೆಲ್ಲಾ ಸ್ಕ್ಯಾನಿಂಗ್ ತಂತ್ರಜ್ಞಾನದ ಮೂಲಕ ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿಡುವ ಕೆಲಸವೊಂದು ಈಗ ಭರದಿಂದ ಸಾಗಿದೆ. ಇದಕ್ಕಾಗಿ ಉನ್ನತ ತಂತ್ರಜ್ಞಾನದ ಸ್ಕ್ಯಾನರ್ ಇತ್ಯಾದಿ ಉಪಕರಣಗಳನ್ನು ಬಳಸಿಕೊಳ್ಳಲಾಗುವುದು.

ಹೀಗೆ ಒಂದು ಮಾದರಿಯ ಸಂಸ್ಥಾನವಾಗಿ ಬೆಳೆದು ನಿಂತಿರುವ ಶೃಂಗೇರಿ ಶ್ರೀ ಶಾರದಾಪೀಠ ತನ್ನ ವಿಭಿನ್ನತೆಯಿಂದ ತನ್ನದೇ ಆದ ಸ್ಥಾನವನ್ನು ದೇಶದ ಧಾರ್ಮಿಕ ನಕ್ಷೆಯಲ್ಲಿ ಪ್ರಾಪ್ತಿಸಿಕೊಂಡಿದೆ.

ಇಂತಹ ಪೀಠವೊಂದಕ್ಕೆ ವಿಶ್ವದ ಜನಸಾಗರದ ಒಕ್ಕೊರಲಿನ ಬೆಂಬಲವಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿಯವರ ಕೃಪಾಶೀರ್ವಾದವಿದೆ. ಅವರ ಸಂಕಲ್ಪಗಳಿಗೆ ಸಾರಥ್ಯನೀಡುವ ಗೌರೀಶಂಕರ್‌ರ ಅವಿರತ ಕಾರ್ಯನಿರ್ವಹಣೆಯ ಛಾತಿಯಿದೆ.. ಬೆಳಗಲಿ ನಮ್ಮ ಈ ಮಠ, ಮೊರೆಯಲಿ ಜಯಕಾರದ ಭೋರ್ಗರೆತ.

Sri Vidyabharathi Book Centre, Sringeri

CC-O. In Public Domain. Digitized by eGangotri



Sri Vidyabharathi Book Centre, Sringeri

CC-O. In Public Domain. Digitized by eGangotri

THE SUCSESS STORY OF GURUBHAVAN

(ENGLISH VERSION)

Sri Vidyabharathi Book Centre, Sringeri

CC-O. In Public Domain. Digitized by eGangotri

FEATURES OF "GURU MANDIR", SRINGERI.

R. Sundaram

The 'Guru Mandir' is a subtle blend of traditional architecture with modern elements. It is a unique project, one of its kind in the world, which is structurally challenging and architecturally innovative. Structurally challenging because, a large column free space of 30m x 30m is created with diagonal arches and in-fill between the arches is of pre-cast concrete slabs. Architecturally innovative because, the building



Sri Vidyabharathi Book Centre, Sringeri

CC-O. In Public Domain. Digitized by eGangotri

is designed in such a manner that there is plenty of natural light and ventilation in the large hall. This unique synthesis of architecture and structure has created an edifice befitting the aura and divinity of Sri Sringeri Sharada Peetam.

The voids created between the pre-cast concrete slabs across the diagonal ribs in the roof create space for bringing in natural light and ample amount of cross ventilation. The height of the centre of the roof is 10 Mtrs. It is easy to accommodate 1500 persons and no necessity to use any artificial lighting and ventilation inside the hall. Windows provided in the periphery and the voids created in the roof create natural movement of the



Sri Vidyabharathi Book Centre, Sringeri

CC-O. In Public Domain. Digitized by eGangotri



air thus creating always the necessary number of air changes inside the hall. The sight lines to the stage, from any position in the hall is comfortable. The concrete roof of pre-cast slabs is coated with pre-coated sheets of terracotta colour, which is maintenance free. The sheet is placed with an air gap so that it ensures insulation on the roof.

The large volume of the space with the beams of light cutting across create a sense of divinity. The aesthetic endeavour to create a unique piece of architecture is extended to the minutest of details everywhere like the flooring pattern, handrails, the type of steps, the entrance porch etc. The entrance corridor, the type of porch, the water body in the north-east

Sri Vidyabharathi Book Centre, Sringeri

CC-O. In Public Domain. Digitized by eGangotri

corner of the building etc. are all singly and together contribute achieving excellent aesthetics. The lighting system that is adopted inside the hall enhances the geometrical pattern of the structure.

Finally, the idea is that a visit to this 'Guru Mandir' should leave you with a feeling of divine serenity and enlightenment.

ARCHITECTS:

The Architects responsible for the design of this monumental structure are M/S. SUNDARAM ARCHITECTS PRIVATE LIMITED, Bangalore. M/S. SUNDARAM ARCHITECTS PRIVATE LIMITED [SAPL] based at Bangalore are one of the most reputed and largest multi-faceted architectural and engineering consultancy firms in South India.

Sri Vidyabharathi Book Centre, Sringeri

CC-O. In Public Domain. Digitized by eGangotri

SAPL are internationally known for innovative projects like the Kanteerava Indoor Stadium, Bangalore, IT Park in Muscat, Hybrid Monorail system in Penang, Bosch projects etc. etc.

They possess a large team of Architects and Engineers led by Mr. R. Sundaram, who is a Master Degree holder from MIT., USA and is a Member with the Council of Architecture. The architectural team is greatly assisted by Mrs. Shalini Jagan, who is an architect and is a Director in the firm.



Sri Vidyabharathi Book Centre, Sringeri

CC-O. In Public Domain. Digitized by eGangotri

Preface

V.R. Gowrishankar

The year was 2001. The occasion was the Mahasivaratri Day. During the night puja, the number of devotees who gathered to witness the special puja was so huge that the hall where His Holiness performs puja was jam-packed and people were struggling even to get a glimpse of His Holiness.

Next evening, when I had darshan of His Holiness, I mentioned the plight of the devotees the previous night and made a submission that probably time had come for constructing a bigger hall where His Holiness can give darshan to people and also perform puja. The God-He is, He immediately smiled and said, "You have My blessings" and that I can think of this project.

I started dreaming about a hall, which would be unique in every sense. because this is where our God is going to reside. At some point, when things were very fluid, His Holiness

Sri Vidyabharathi Book Centre, Sringeri

CC-O. In Public Domain. Digitized by eGangotri



had come to declare open the Vidya Bharathi building when His Holiness going round the facilities commented to me that devotees are getting good facilities while Sachidananda Vilas is yet to see a facelift. This made me think and discuss with devotee friends. I felt that we should have an annexe to the hall being planned, which would be with all required facilities to the needs of His Holiness. That is how, the Guru Bhavanam project was conceived and on 5th December 2001, His Holiness laid the foundation stone for this building.

We had visualized that this structure should be one of its kind anywhere. By Goddess Sharada's grace and blessings of His Holiness, the dream I had is fructifying. Our architect

Sri Vidyabharathi Book Centre, Sringeri

CC-O. In Public Domain. Digitized by eGangotri

devotee Sri R Sundaram and his team have been able to give such a fine structure that for the next few decades we can boast of possessing a technological marvel. Sri Sarabeswar and team did a dedicated job in the construction of this building. Contributions from people like Sri Vinoo Naik of Mumbai, is of no small measure.

Funding this project of such huge proportion was always a challenge. But devotees of Sri Sharada Peetam have come up with such magnanimous help - a few in monetary fashion, many in kind in the form of valuable materials - that the challenge was never a serious one.

Support from various sub-contractors was overwhelming. They worked very hard to see that the building gets ready in a record 16 months time.

Miracles happened in a serial fashion. Help from unknown sources, thoughts that changed the ideas and imagination, came in a striking fashion.

This hall will boast of a mechanical clock - one of the very few of its kind in the world

Sri Vidyabharathi Book Centre, Sringeri

CC-O. In Public Domain. Digitized by eGangotri

and the biggest veena in the world, thanks to Prof. Unruh & Mrs. Rashmi and Sri Nataraja, Bangalore. One of the biggest kalasams ever made, a 15 $^{1}/_{2}$ tall kalasam, is on top of the Guru Bhavanam. A 14' mammoth, unique chandelier lights the interior of the hall.

As you are aware, this has been a Dream Project of all of us and the dedication of the building which will be the abode of Lord Chandramoule-shwara and where our Living God, the Jagadguru will reside, is a great and unique occasion for all the devotees of Sri Sharada Peetam, Sringeri. On behalf of all the devotees I made a submission to His Holiness to bless us to record this momentous,

Sri Vidyabharathi Book Centre, Sringeri

CC-O. In Public Domain. Digitized by eGangotri

historical event by releasing a commemoration volume, which will tell the next century, and more how this dedication function was done.

It is with His blessings that this commemoration volume "GURU MAHIMA" is being released. Initially, we had the idea of publishing old records of historical value depicting the high pedestal in which Jagadgurus of Sri Sringeri Math were kept by various rulers. When I started tracing various original records I found the task was too daunting and an impossible one in a short time of few months. Hence I requested Prof. A.K.Shastry, a well-known historian, to write a brief on these records, which has been included. A few letters received from various rulers and a few letters sent from the Math have been reproduced just to recap the history.

My request to devotee friends received a tremendous response. So much so that we are bringing out a commemoration volume running to more than 1100 pages - a record by itself for history. I remain obliged for all the help received from well-wishers.

Sri Vidyabharathi Book Centre, Sringeri

CC-O. In Public Domain. Digitized by eGangotri

The special care and interest taken by M/s Abhinav Offset, Chennai in printing this commemoration volume deserves acknowledgement.

We had a dream. It is our luck that through Goddess Sharada's grace and blessings of His Holiness, we have been able to fulfil our dream. May Goddess Sharada and the ~Jagadguru continue to shower all the best in life on each one of us and make us lead a life of peace and prosperity.

Yes, today every devotee of Dakshinamnaya Sri Sharada Peetam, Sringeri is proud. We have fulfilled a dream. I am sure, His Holiness will feel pleased at this special dedication and will shower His benevolence on all His devotees.



Sri Vidyabharathi Book Centre, Sringeri

CC-O. In Public Domain. Digitized by eGangotri



With Best Compliments from

G. Ravishankar

HOTEL RRR

Gandhi Square
Mysore - 577001

G. Raveendra

HOTEL ELAPUR

Shree Harsha Road,
Mysore - 577001

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ವಿ.ಆರ್. ಗೌರೀಶಂಕರ್

ಶೃಂಗೇರಿ ಶಾರದಾ ಪೀಠದ ೩೨ನೇ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥರ ಕಾಲದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥರ ಅಣತಿಯಂತೆ ಶೃಂಗೇರಿ ಮಠದ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದ ವಿ.ಆರ್.ಗೌರಿಶಂಕರ್ ಇಂಜಿನಿಯರ್ ಪದವೀಧರರು.

ಅವರ ತಂದೆ ರಾಮಚಂದ್ರ ಶಾಸ್ತ್ರಿಗಳು ಶ್ರೀಮಠದಲ್ಲಿಯೇ ಸೇವೆ ಸಲ್ಲಿಸಿದ್ದ ಅನುಪಮ ಪಂಡಿತರಲ್ಲೊಬ್ಬರಾಗಿದ್ದರು. ಜಗದ್ಗುರುವರ್ಯರ ಪರಮ ಕೃಪಾಕಟಾಕ್ಷ ಹೊಂದಿ ಸಂಸ್ಥಾನದ ಏಳಿಗೆಗಾಗಿ ಶ್ರೀ ಶ್ರೀಗಳ ಸೇವೆ ಸಲ್ಲಿಸುತ್ತಿರುವ ಗೌರೀಶಂಕರ್ ಶೃಂಗೇರಿ ಸಂಸ್ಥಾನ ಕಂಡ ವಿಶಿಷ್ಟ ಆಡಳಿತಾಧಿಕಾರಿ.

ತಮ್ಮ ಕನಸು ನನಸಾದ, ಗುರುಭಕ್ತಿಯ ಸಾಫಲ್ಯದ ಕತೆಯನ್ನು ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ.

ರಮೇಶ್ ಬೇಗಾರ್

ಶೃಂಗೇರಿಯಲ್ಲಿ ಸದಾ ವಿಭಿನ್ನ ಸಾಂಸ್ಕೃತಿಕ ಚಟುವಟಿಕೆ ಸಂಘಟನೆಗಳಿಗೆ ಹೆಸರಾದ ಯುವ ಕಲಾವಿದ ರಮೇಶ್ ಬೇಗಾರ್ ಪರಮಪೂಜ್ಯ ಜಗದ್ಗುರುಗಳ ಆಶೀರ್ವಾದ– ಮಾರ್ಗದರ್ಶನದಲ್ಲಿ ಹಲವಾರು ನಾಟಕ, ಸಾಕ್ಷ್ಯ ಚಿತ್ರಗಳ ನಿರ್ಮಾಣದ ಅನುಭವ ಹೊಂದಿದ್ದಾರೆ.

ಗುರುನಿವಾಸದ ಉದ್ಘಾಟನೆಯ ಈ ಶುಭ ಸಂದರ್ಭದಲ್ಲಿ ಈ ವಿಭಿನ್ನ ಪುಸ್ತಕವನ್ನು ಸಂಯೋಜಿಸಿ – ನಿರೂಪಿಸಿ ಹೊರ ತಂದಿದ್ದಾರೆ.

Sri Vidyabharathi Book Centre, Sringeri